# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 273 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 21–05–2024 ಮಂಗಳವಾರ | ಪುಟ: 4 | ಬೆಲೆ : ರೂ.2–00
Volume - 01 Issue - 273 | Title- Code: KARKAN 28269 | Chitradurga | Date: 21-05-2024 Tuesday | Page: 4 | Price: Rs. 2-00



ಒಳಪುಟದ ಸುದ್ದಿಗಳು
ಸಮಾಜದ ಬದಲಾವಣೆಗೆ ಸಂಕಲ್ಪ ಮಾಡಿದ ಮಹಾನ್ ವ್ಯಕ್ತಿ ಗೌತಮ ಬುದ್ಧ 2
ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆ ವಿಧಿಸಲು ಆಗ್ರಹ, ಮಡಿವಾಳರ ಪ್ರತಿಭಟನೆ 3
ಜನರಿಗೆ ಆರೋಗ್ಯಭಾಗ್ಯ ಕಲ್ಪಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಮುಂದು: ಡಾ.ಬಿಂದುಶ್ರೀ 4



ಸುದ್ದಿ, ಜಾಹಿರಾತಿಗೆ 9686622252


### ಶುಭ ನುಡಿ

ಬಟ್ಟೆ ನೋಡಿ ಗೆಳೆತನ ಮಾಡಬೇಡ, ಗುಣ ನೋಡಿ ಗೆಳೆತನ ಮಾಡು , ಯಾಕೆಂದರೆ ಬಟ್ಟೆ ಹರಿದು ಹೋಗುವ ತನಕ ಮಾತ್ರ ಇರುತ್ತದೆ, ಗುಣ ಸಾಯುವವರೆಗೂ ಇರುತ್ತದೆ !!

» ಶುಭೋದಯ

# ಚಳ್ಳಕೆರೆ: ಹದ ಮಳೆ, ಅಪಾರ ಹಾನಿ

» ಚಳ್ಳಕೆರೆ

ಪ್ರಸ್ತುತ ವರ್ಷದ ಕೃತಿಕ ಮಳೆ ಚಳ್ಳಕೆರೆ ತಾಲ್ಲೂಕಿನಾದ್ಯಂತ ನಿರೀಕ್ಷೆಗೂ ಮೀರಿ ಉತ್ತಮವಾಗಿ ಎಲ್ಲೆಡೆ ಮಳೆಯಿಂದ ನೆಲಹಸಿಯಾಗಿ ನೀರಿನ ಅಭಾವವನ್ನು ಕಡಿಮೆಗೊಳಿಸುವಲ್ಲಿ ಯಶಸ್ವಿಯಾಗಿದೆ. ಮಳೆಯಿಂದ ಕೆಲವೆಡೆ ಹಾನಿಯಾದರೂ ಸಹ ಮಳೆಯ ಆಗಮನ ಈ ಭಾಗದ ರೈತರಿಗೆ ನೆಮ್ಮದಿಯನ್ನು ಉಂಟು ಮಾಡುವಲ್ಲಿ ಯಶಸ್ವಿಯಾಗಿದೆ.

ಸೋಮವಾರ ಬೆಳಗಿನ ಜಾವ ಮತ್ತೊಮ್ಮೆ ತಾಲ್ಲೂಕಿನಾದ್ಯಂತ ಎರಡನೇ ಬಾರಿಗೆ ಉತ್ತಮ ಮಳೆಯಾಗಿ ಚಳ್ಳಕೆರೆ–28.09, ಪರಶುರಾಮಪುರ–32.08, ನಾಯಕನಹಟ್ಟಿ–29.02, ತಳಕು–21.04, ದೇವರಮರಿಕುಂಟೆ–20.02 ಒಟ್ಟು 131.05 ಎಂ.ಎಂ. ಮಳೆಯಾಗಿದ್ದು, ಕಳೆದ ಮೇ.13ರ ಸೋಮವಾರವೂ ಸಹ 147 ಎಂ.ಎಂ.ಮಳೆಯಾಗಿ ಒಟ್ಟು 278.05 ಎಂ.ಎಂ.ಮಳೆಯಾಗಿದೆ. ತಾಲ್ಲೂಕಿನ ಗಡಿಭಾಗದ ಗ್ರಾಮಗಳಲ್ಲದೆ ತಳಕು ಹೋಬಳಿಯ ಅನೇಕ ಗ್ರಾಮಗಳು ಮಳೆ ಹಾನಿಗೀಡಾಗಿವೆ.ಸೋಮವಾರ ಸುರಿದ ಮಳೆಗೆ ತಾಲ್ಲೂಕಿನ ಬೂಕ್ಲರಹಳ್ಳಿ ಗ್ರಾಮದ ಓಬಮ್ಮ ಎಂಬುವವರ ರಿ ಸರ್ವೆ ನಂ. 8ರಲ್ಲಿ ಟಮೋಟೊ ಬೆಳೆ ಹಾಕಿದ್ದು ಮಳೆಗೆ ಬೆಳೆ ಸಂಪೂರ್ಣವಾಗಿ ಕೊಚ್ಚಿಹೋಗಿ 80 ಸಾವಿರ ನಷ್ಟ ಸಂಭವಿಸಿದೆ.ತಾಲ್ಲೂಕಿನ ಬೇಡರೆಡ್ಡಿಹಳ್ಳಿ ಗ್ರಾಮದ ಬಸವರಾಜ







ಎಂಬುವವರಿಗೆ ಸೇರಿದ ವಾಸದ ಮನೆಯ ಗೋಡೆ ಕುಸಿದು ಬಿದ್ದು 50 ಸಾವಿರ ನಷ್ಟ ಸಂಭವಿಸಿದೆ.ತಾಲ್ಲೂಕಿನ ಎನ್.ದೇವರಹಳ್ಳಿ ಗ್ರಾಮದ ಭಾಗ್ಯಮ್ಮ ಎಂಬುವವರ ವಾಸದ ಮನೆ ಕುಸಿದುಬಿದ್ದು 50 ಸಾವಿರ ನಷ್ಟ ಉಂಟಾಗಿದೆ. ಇವರೆಗೂ ಮಳೆಯಿಂದ ಕೋಟ್ಯಾಂತರ ಮೌಲ್ಯದ ಬೆಳೆ ನಷ್ಟವಾಗಿದೆ. ಮಳೆಯಿಂದ ಹಾನಿಗೊಳಗಾದ ಪ್ರದೇಶಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಮಳೆಯಾಗುವ ಸಂಭವವಿದ್ದು ತಾಲ್ಲೂಕು ಆಡಳಿತ ಮುಂಜಾಗ್ರತಾ ಕ್ರಮವನ್ನು ಕೈಗೊಂಡು ಹೆಚ್ಚಿನ ಹಾನಿನಿಯಂತ್ರಿಸುವ ಕ್ರಮಕ್ಕೆ ಮುಂದಾಗಬೇಕೆಂದು ಸಾರ್ವಜನಿಕರ ಒತ್ತಾಯವಾಗಿದೆ.ಈಗಾಗಲೇ ತಾಲ್ಲೂಕಿನ ಕೆಲವು ಭಾಗಗಳಲ್ಲಿ ರೈತರು ತಮ್ಮ ಜಮೀನುಗಳನ್ನು ಹಸನುಗೊಳಿಸಿಕೊಳ್ಳುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಕಳೆದ ತಿಂಗಳು ಕೇಂದ್ರ ಸರ್ಕಾರದಿಂದ ಪ್ರಧಾನಮಂತ್ರಿ ಫಸಲ್‌ಭೀಮಾ ಯೋಜನೆ ಹಣ ರೈತರ ಖಾತೆಯಲ್ಲಿದ್ದು ಇದು ರೈತರಿಗೆ ಹೆಚ್ಚು ಸಂತಸ ತಂದಿದೆ. ರೈತರೇ ಈ ಬಗ್ಗೆ ಈ ಬಾರಿಯ ಬಿತ್ತನೆ ಕಾರ್ಯಕ್ಕೆ ಹಣಕಾಸಿನ ತೊಂದರೆ ಎದುರಾಗದು ಎಂದಿದ್ದಾರೆ.

## ಫಾಸ್ಟ್ ನ್ಯೂಸ್

### ಮಳೆ ವರದಿ: ಸೂಗೂರುನಲ್ಲಿ 52.4 ಮಿ.ಮೀ ಮಳೆ

» ಚಿತ್ರದುರ್ಗ

ಭಾನುವಾರ ಸುರಿದ ಮಳೆ ವಿವರದನ್ವಯ ಹಿರಿಯೂರು ತಾಲ್ಲೂಕಿನ ಸೂಗೂರುನಲ್ಲಿ 52.4ಮಿ.ಮೀ ಮಳೆಯಾಗಿದೆ. ಇದು ಜಿಲ್ಲೆಯಲ್ಲಿ ಸುರಿದ ಅತ್ಯಧಿಕ ಮಳೆಯಾಗಿದೆ. ಹಿರಿಯೂರು ತಾಲ್ಲೂಕಿನ ಹಿರಿಯೂರು 11.4 ಮಿ.ಮೀ, ಇಕ್ಕನೂರು 26 ಮಿ.ಮೀ, ಈಶ್ವರಗೆರೆ 21.8 ಮಿ.ಮೀ, ಬಬ್ಬೂರು 14.4 ಮಿ.ಮೀ ಮಳೆಯಾಗಿದೆ. ಚಿತ್ರದುರ್ಗ ತಾಲ್ಲೂಕಿನ ಚಿತ್ರದುರ್ಗ–1ರಲ್ಲಿ 8.8 ಮಿ.ಮಿ, ಚಿತ್ರದುರ್ಗ–2ರಲ್ಲಿ 10.9ಮಿ.ಮೀ, ತುರುವನೂರು 12.6 ಮಿ.ಮೀ, ಐನಹಳ್ಳಿ 9.2 ಮಿ.ಮೀ, ಹಿರೇಗುಂಟನೂರು 8.7 ಮಿ.ಮೀ, ಸಿರಿಗೆರೆ 26.2 ಮಿ.ಮೀ, ಭರಮಸಾಗರದಲ್ಲಿ 35 ಮಿ.ಮೀ ಮಳೆಯಾಗಿದೆ. ಹೊಸದುರ್ಗ ತಾಲ್ಲೂಕಿನ ಹೊಸದುರ್ಗದಲ್ಲಿ 46.8ಮಿ.ಮೀ, ಬಾಗೂರಿನಲ್ಲಿ 3.5 ಮಿ.ಮೀ, ಮಾಡದಕೆರೆಯಲ್ಲಿ 40 ಮಿ.ಮೀ, ಮತ್ತೋಡಿನಲ್ಲಿ 10.4ಮಿ.ಮೀ ಹಾಗೂ ಶ್ರೀರಾಂಪುರದಲ್ಲಿ 30.2 ಮಿ.ಮೀ ಮಳೆಯಾಗಿದೆ. ಹೊಳಲ್ಕೆರೆ ತಾಲ್ಲೂಕಿನ ಹೊಳಲ್ಕೆರೆಯಲ್ಲಿ 1.6ಮಿ.ಮೀ, ರಾಮಗಿರಿಯಲ್ಲಿ 5.4ಮಿ.ಮೀ, ಚಿಕ್ಕಜಾಜೂರಿನಲ್ಲಿ 10.8 ಮಿ.ಮೀ, ಬಿ.ದುರ್ಗ 8.2 ಮಿ.ಮೀ, ಹೆಚ್.ಡಿ.ಪುರದಲ್ಲಿ 12.2 ಮಿ.ಮೀ, ತಾಳ್ಯ 3 ಮಿ.ಮೀ ಮಳೆಯಾಗಿದೆ. ಚಳ್ಳಕೆರೆ ತಾಲ್ಲೂಕಿನ ಚಳ್ಳಕೆರೆಯಲ್ಲಿ 28.9 ಮಿ.ಮೀ, ಪರಶುರಾಂಪುರ 32.8, ನಾಯಕನ ಹಟ್ಟಿ 29.2, ತಳಕು 21.4, ಡಿ.ಮರಿಕುಂಟೆಯಲ್ಲಿ 20.2 ಮಿ.ಮೀ ಮಳೆಯಾಗಿದೆ. ಮೊಳಕಾಲ್ಮುರು ತಾಲ್ಲೂಕಿನ ಮೊಳಕಾಲ್ಮುರಿನಲ್ಲಿ 23 ಮಿ.ಮೀ, ರಾಯಾಪುರ 7.8 ಮಿ.ಮೀ, ಬಿ.ಜಿ.ಕೆರೆ 37 ಮಿ.ಮೀ, ರಾಂಪುರ 2.2 ಮಿ.ಮೀ, ದೇವಸಮುದ್ರದಲ್ಲಿ 4 ಮಿ.ಮೀ ಮಳೆಯಾಗಿದೆ. 12 ಮನೆಗಳು ಭಾಗಶಃ ಹಾನಿ: ಭಾನುವಾರ ಸುರಿದ ಮಳೆಗೆ ಜಿಲ್ಲೆಯಾದ್ಯಂತ ಭಾಗಶಃ 12 ಮನೆಗಳು ಹಾಗೂ 5.53 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಚಿತ್ರದುರ್ಗ ತಾಲ್ಲೂಕಿನಲ್ಲಿ ಭಾಗಶಃ 1 ಮನೆಹಾನಿಯಾಗಿದೆ. ಚಳ್ಳಕೆರೆ ತಾಲ್ಲೂಕಿನಲ್ಲಿ 1 ಭಾಗಶಃ ಮನೆ ಹಾನಿ, ಹೊಸದುರ್ಗ ತಾಲ್ಲೂಕಿನಲ್ಲಿ ಭಾಗಶಃ 6 ಮನೆ ಹಾನಿ ಹಾಗೂ 0.35 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಹಿರಿಯೂರು ತಾಲ್ಲೂಕಿನಲ್ಲಿ ಭಾಗಶಃ 3 ಮನೆಹಾನಿ ಹಾಗೂ 2.18 ಹೆಕ್ಟೇರ್ ತೋಟಗಾರಿಕೆ ಬೆಳೆಹಾನಿಯಾಗಿದೆ. ಮೊಳಕಾಲ್ಮುರು ತಾಲ್ಲೂಕಿನಲ್ಲಿ 1 ಮನೆ ಭಾಗಶಃ ಮನೆಹಾನಿಯಾಗಿದೆ ಎಂದು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

### ಮೇ.22ರಂದು ರಾಷ್ಟ್ರೀಯ ಡೆಂಗೀ ದಿನದ ಅಂಗವಾಗಿ ಜಾಥಾ ಕಾರ್ಯಕ್ರಮ

» ಚಿತ್ರದುರ್ಗ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ರಾಷ್ಟ್ರೀಯ ಡೆಂಗೀ ದಿನದ ಅಂಗವಾಗಿ ಜಾಥಾ ಕಾರ್ಯಕ್ರಮವನ್ನು ಇದೇ ಮೇ.22ರಂದು ಬೆಳಿಗ್ಗೆ 10.30ಕ್ಕೆ ಚಿತ್ರದುರ್ಗ ನಗರದಲ್ಲಿ ಹಮ್ಮಿಕೊಳ್ಳಲಾಗಿದೆ. ರಾಷ್ಟ್ರೀಯಡೆಂಗೀದಿನದಈ ವರ್ಷದ ಘೋಷವಾಕ್ಯ "ಸಮುದಾಯದೊಂದಿಗೆ ಸೇರಿ ಡೆಂಗಿ ಜ್ವರವನ್ನು ನಿಯಂತ್ರಿಸೋಣ" ಎಲ್ಲ ಹಂತಗಳಲ್ಲಿಯೂ ಚಟುವಟಿಕೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ರಾಷ್ಟ್ರೀಯ ಡೆಂಗೀ ದಿನದ ಅಂಗವಾಗಿ ಜಾಥಾ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಚಾಲನೆ ನೀಡುವರು. ಜಾಥಾವು ಚಿತ್ರದುರ್ಗ ನಗರದ ಕೋಟೆ ಮುಂಭಾಗದ ಸೆಂಟ್ ಮೇರಿಸ್ ನಸಿಂಗ್ ಕಾಲೇಜ್‌ನಿಂದ ಆರಂಭವಾಗಿ, ಏಕನಾಥೇಶ್ವರಿ ಪಾದಗುಡಿ ವೃತ್ತದಲ್ಲಿ ಮಾನವ ಸರಪಳಿ ಮಾಡಿ, ಕಾಮನಬಾವಿ ಬಡಾವಣೆ, ಕರುವಿನಕಟ್ಟೆ ವೃತ್ತದಿಂದ ಪೋಸ್ಟ್ ಆಫೀಸ್ ಮಾರ್ಗವಾಗಿ ಮಹಾರಾಣಿ ಕಾಲೇಜ್‌ನಿಂದ ಸೆಂಟ್ ಮೇರಿಸ್ ನರ್ಸಿಂಗ್ ಕಾಲೇಜ್‌ಗೆ ಅಂತ್ಯಗೊಳಿಸಲಾಗುವುದು.

## ಹೊಸದುರ್ಗ ಪಟ್ಟಣದಲ್ಲಿ 120.6 ಸೆ.ಮೀ ಮಳೆ

» ಹೊಸದುರ್ಗ

ಶನಿವಾರರಾತ್ರಿಯಿಂದತಡರಾತ್ರಿಯವರೆಗೂಸಹಾ ಬಂದಂತಹ ಅಬ್ಬರದ ಮಳೆ ತಾಲೂಕಿನಾದ್ಯಂತ ಹಲವಾರು ಅವಾಂತರ ಸೃಷ್ಟಿಸಿದೆ.

ಹೊಸದುರ್ಗ ಪಟ್ಟಣದಲ್ಲಿ 120.6 ಸೆ.ಮೀ ಮಳೆಯಾಗಿದ್ದು ತಾಲೂಕಿನ ಕೆಲವು ಪ್ರದೇಶಗಳಾದ ಎಂ.ಜಿ.ದಿಬ್ಬ ಕೆರೆ ಕೋಡಿ ಬಿದ್ದು ಚನ್ನಸಮುದ್ರ ಸಂಪರ್ಕಿಸುವ ರಸ್ತೆ ಸಂಪೂರ್ಣ ಕಡಿತಗೊಂಡಿದೆ. ಅಲ್ಲದೆ ಕಡದಿನಕೆರೆ ರಸ್ತೆ ಸಂಪರ್ಕ ಕಡಿತಗೊಂಡಿದೆ.

ಪಟ್ಟಣ ಪ್ರದೇಶ ಸೇರಿದಂತೆ ತಾಲೂಕಿನ ಹೋಬಳಿಗಳ ಹಲವಾರು ಗ್ರಾಮಗಳಲ್ಲಿ ಮನೆಗಳು ಬಿದ್ದು ಹೋಗಿವೆ, ನಾನಾ ಕಡೆಗಳಲ್ಲಿ ಮನೆಯೋಳಗೆ ನೀರು ನುಗ್ಗಿ ಮನೆಗಳಿಗೆ ಹಾನಿಯಾಗಿದ್ದರೆ ಇನ್ನು ಕೆಲವು ಕಡೆ ಅಡಿಕೆ ಬಾಳೆ ಬೆಳೆಗಳಿಗೆ ಸಾಕಷ್ಟು ಹಾನಿಯಾಗಿದೆ.

ತಾಲೂಕಿನ ದೇವಿಗೆರೆ ಮತ್ತು ಮಧುರೆ ರಾಜ್ಯ ಹೆದ್ದಾರಿಯ ರಸ್ತೆಗಳು ಕೆಲವು ಕಡೆ ಕಳಫೆ ಡಾಂಬರ್‌ನಿಂದ ನಿರ್ಮಾಣವಾಗಿರುವ ಪ್ರಮುಖ ರಸ್ತೆಗಳು ಕಿತ್ತು ಹೋಗಿ ಬೈಕ್ ಸವಾರರು ವಾಹನ ಚಾಲಕರು ಹಾಗು ಪ್ರಯಾಣಿಕರು ತುಂಬಾ ತೊಂದರೆ ಅನುಭವಿಸುವಂತಾಯಿತು.



ತಾಲೂಕಿನ ಕೊಂಡಜ್ಜಿ ಆಲಹಳ್ಳಿಯ ಎ.ಕೆ. ಕಾಲೋನಿಗೆ ನೀರು ನುಗ್ಗಿ ಕೆಲವು ಮನೆಗಳಿಗೆ ಅಪಾರ ಹಾನಿಯಾಗಿವೆ.

ಹಾನಿಯಾದ ಪ್ರದೇಶಗಳಿಗೆ ಬೇಟಿ ನೀಡಿದ್ದ ತಹಶಿಲ್ದಾರ್‌ತಿರುಪತಿಪಾಟೀಲ್‌ಹಾಗೂತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸುನೀಲ್‌ಕುಮಾರ್ ಬೇಟಿ ನೀಡಿ ಪರಿಶೀಲಿಸಿ ಸೂಕ್ರ ಕ್ರಮಗಳನ್ನ ಕೈಗೊಳ್ಳೂವುರ ಜೋತೆಗೆ ವರದಿಯನ್ನ ತರಿಸಿಕೊಂಡು ಮನೆ ಹಾಗೂ ಬೆಳೆ ಹಾನಿಗೊಳಗಾದವರಿಗೆ ಸರ್ಕಾರದಿಂದ ಪರಿಹಾರವನ್ನ ಕೊಡಿಸುವ ಭರವಸೆ ನೀಡಿದ್ದಾರೆ.

ಶನಿವಾರ ರಾತ್ರಿ ಸುರಿದ ಮಳೆಯಿಂದ ತಾಲೂಕಿನ ಆಲಹಳ್ಳಿಯ ಎ,ಕೆ,ಕಾಲೋನಿಯ ಹಲವು ಮನೆಗಳಿಗೆ ನೀರು ನುಗ್ಗಿದ್ದು ಅವರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗುವುದು,ಅಲ್ಲದೆ ಎಂ.ಜಿ.ದಿಬ್ಬದ ಕೆರೆ ಒಡೆದು ಹೋಗಿ ರಸ್ತೆ ಸಂಪರ್ಕ ಕಡಿತವಾಗಿರುವ ಪರಿಣಾಮ ನೀರು ಕಡಿಮೆ ಯಾಗುತ್ತಿದ್ದಂತೆ ಇದರ ಕಾಮಗಾರಿಯನ್ನ ಕೈಗೆತ್ತಿ ಕೊಳ್ಳಲಾಗುವುದು. ಕಡಿದಿನಕೆರೆ ರಸ್ತೆ ಸಂಪರ್ಕ ಕಡಿತವಾಗಿರುವ ಹಿನ್ನೆಲೆಯಲ್ಲಿ ಅಲ್ಲಿಯೂ ಈಗಾಗಲೆ ಇಂಜಿನಿಯರ್‌ಗಳು ಬೇಟಿ ನೀಡಿ ಕಾಮಗಾರಿ ಶುರುಮಾಡಿದ್ದಾರೆ. ತಾಲೂಕಿನಲ್ಲಿ ಎಲ್ಲೆಲ್ಲಿ ನೀರು ನಿಂತು ಸಾರ್ವಜನಿಕರಿಗೆ ತೊಂದರೆಯಾಗಿದೆಯೋ ಆಯಾ ಕಡೆ ನೀರು ತಿರುವು ಮಾಡುವಂತಹ ಕ್ರಮಗಳನ್ನ ವಹಿಸಲಾಗುತ್ತಿದೆ, ಮುಖ್ಯವಾಗಿ ಸಾರ್ವಜನಿಕರು ನೀರು ಹರಿಯುವಂತಹ ಕಡೆ ಜಾಗರೂಕತೆಯಿಂದ ಪ್ರಯಾಣ ಮಾಡಬೇಕು,

ಪುಟ 2

## ಬರ-ವಿಮೆಗೆ ತಪ್ಪು ಮಾಹಿತಿ ನಮೂದು-ಖಾತೆಗೆ ಬರಲಿಲ್ಲಾ ಹಣ



» ಪರಶುರಾಂಪುರ

ಬರ ಪರಿಹಾರ ಹ ಾಗೂ ಬೆಳೆ ವಿಮೆಯ ಜಿಪಿಎಸ್ ವೇಳೆಯಲ್ಲಿ ತಪ್ಪು ವರದಿಯಿಂದ ಹಲವು ರೈತರು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಎಂದು ಅಖಂಡ ಕರ್ನಾಟಕ ರಾಜ್ಯ ರೈತ ಸಂಘ ದಿಂದ ಗ್ರಾಮದ ನಾಢಕಚೇರಿ ಆವರಣದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಮಳೆ ಬೆಳೆ ಇಲ್ಲದೆ ರೈತರು ಕಂಗಾಲಾಗಿದ್ದಾರೆ.ಮನಗಂಡು ಈಗಾಗಲೇ ಸರ್ಕಾರ ಚಳ್ಳಕೆರೆ ತಾಲೂಕನ್ನ ಬರಪೀಡಿತ ಪ್ರದೇಶ ಎಂದು ಘೋಷಿಸಿದೆ.ಬರುವ ಅಲ್ಪ ಸೌಲಭ್ಯದಲ್ಲಿ ಸಿದ್ದೇಶ್ವರನದುರ್ಗ ಗ್ರಾಪಂ ವ್ಯಾಪ್ತಿ ಸೇರಿದಂತೆ ಇನ್ನಿತರ ಭಾಗದಲ್ಲಿ ಬರ ಮತ್ತು ಇನ್ಸೂರೆನ್ಸ್ ಬರದೇ ರೈತರಿಗೆ ತಾರತಮ್ಯವಾಗಿದೆ ಇದನ್ನ ಸರಿಪಡಿಸಬೇಕೆಂದು ಅಧ್ಯಕ್ಷ ಕೆ.ಚಿಕ್ಕಣ್ಣ ಒತ್ತಾಯಿಸಿದರು.ವಂಚಿತ ರೈತರಿಗೆ ಬರಪರಿಹಾರ ಹಾಗೂ ಬೆಳೆ ವಿಮೆ ಶೀಘ್ರವಾಗಿ ನೀಡಬೇಕು.

## ಪ್ರಮುಖ ಸುದ್ದಿ

# ಬೆಳೆ ನಷ್ಟ ಪರಿಹಾರ ತಾರತಮ್ಯ ಸರಿಪಡಿಸುವಂತೆ ಆಗ್ರಹ

» ಚಿತ್ರದುರ್ಗ

ಬೆಳೆ ವಿಮೆ ಮತ್ತು ಬೆಳೆ ನಷ್ಟ ಪರಿಹಾರದಲ್ಲಿ ಆಗಿರುವ ತಾರತಮ್ಯವನ್ನು ಸರಿಪಡಿಸುವಂತೆ ಆಗ್ರಹಿಸಿ ಚಿತ್ರದುರ್ಗ ತಾಲ್ಲೂಕು ಕರ್ನಾಟಕ ರಾಜ್ಯ ರೈತ ಸಂಘ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದೆ.

ಇಂದು ಜಿಲ್ಲಾಧಿಕಾರಿಗಳನ್ನು ಬೇಟಿ ಮಾಡಿದ ಚಿತ್ರದುರ್ಗ ತಾಲ್ಲೂಕು ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು, ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಸುಮಾರು ಶೇ.30% ರಷ್ಟು ಬೆಳೆ ವಿಮೆ ರೈತರ ಖಾತೆ ಜಮಾ ಆಗಿರುವುದಿಲ್ಲ ಮತ್ತು ಕೂಡಲೇ ಬಿಡುಗಡೆ ಮಾಡಿ ರೈತ ಖಾತೆಗೆ ಹಣ ವರ್ಗಾವಣೆ ಮಾಡಬೇಕು. ಬೆಳೆ ನಷ್ಟ ಪರಿಹಾರವು ಮಳೆಯಾಶ್ರಿತ ಬೆಳೆಗಳಾದ ಶೇಂಗಾ ಮತ್ತು ಮೆಕ್ಕೆಜೋಳಕ್ಕೆ ಮಾತ್ರ ನೀಡಿರುತ್ತಾರೆ. ಇನ್ನುಳಿದ ಇತರೆ ಬೆಳೆಗಳಿಗೆ ಬೆಳೆ ನಷ್ಟ ಪರಿಹಾರ ನೀಡಿರುವುದಿಲ್ಲ. ಪಹಣಿಯಲ್ಲಿ ಕೊಳವೆ ಬಾವಿಯೆಂದು ನಮೂದಾಗಿದ್ದಾರೆ ಅಂತಹ ರೈತರು ಸಹ ಬೆಳೆ ನಷ್ಟ ಪರಿಹಾರ ನೀಡಿರುವುದಿಲ್ಲ. ಸರ್ಕಾರವು ಬೆಳೆಯಾಶ್ರಿತ ಬೆಳೆಗೆ ಹೆಕ್ಟೇರ್‌ಗೆ ರೂ.8500/–, ನೀರಾವರಿಗೆ



ರೂ.17000/–, ದೀಘ್ರವಾಧಿ ಬೆಳೆಗೆ ರೂ.22000/– ಎಂದು ಘೋಷಣೆ ಮಾಡಿ ನೀರಾವರಿ ಹಾಗೂ ದೀಘ್ರವಾಧಿ ಬೆಳೆ ಹೊಂದಿದ ರೈತರಿಗೆ ಪರಿಹಾರದ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಕೂಡಲೇ ಪರಿಹಾರ ಬಿಡುಗಡೆ ಮಾಡಿ ರೈತರ ಖಾತೆಗೆ ಜಮಾ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

2023–24 ರಲ್ಲಿ ರೈತರು ತೀವ್ರ ಬರಗಾಲ ಅನುಭವಿಸಿದ್ದು, 2024ರ ಮಂಗಾರು ಮಳೆ ಪ್ರಾರಂಭವಾಗಿದ್ದು, ರೈತರಿಗೆ ಬಿತ್ತನೆ ಮಾಡಲು ರೈತರಿಗೆ ಉಚಿತವಾಗಿ ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳನ್ನು ವಿತರಿಸಬೇಕು. ಸರ್ಕಾರವು ರೈತರ ಖಾತೆಗೆ ಬೆಳೆ ವಿಮೆ ಹಾಗೂ ಬೆಳೆ ನಷ್ಟ ಪರಿಹಾರ ಹಣ ಹಾಗೂ ಇತರೆ ವೃದ್ಯಾಪ್ಯ ವೇತನ, ವಿಧವಾ ವೇತನಗಳನ್ನು ಸರ್ಕಾರದ ಆದೇಶದ ಪ್ರಕಾರದ ರೈತರ ಸಾಲಕ್ಕೆ ಈ ಹಣವನ್ನು ಜಮಾ ಮಾಡಬಾರದೆಂದು ಆದೇಶವಿದ್ದರು ಕೂಡ, ಬ್ಯಾಂಕ್ ಮ್ಯಾನೇಜರ್‌ಗಳು ಸರ್ಕಾರದಿಂದ ಬಂದಂತಹ ಎಲ್ಲಾ ಹಣವನ್ನು ಸಾಲಕ್ಕೆ ಜಮಾ ಮಾಡಿಕೊಂಡಿರುತ್ತಾರೆ. ಜಿಲ್ಲಾಧಿಕಾರಿಗಳು ಕೂಡಲೇ ಲೀಡ್ ಬ್ಯಾಂಕ್ ಮ್ಯಾನೇಜರ್‌ಗೆ ಮಾಹಿತಿ ನೀಡಿ ಸಾಲದಿಂದ ಬಂದ ಸಹಾಯಧನವನ್ನು ರೈತರ ಸಾಲಕ್ಕೆ ಜಮಾ ಮಾಡಿಕೊಳ್ಳಬಾರದೆಂದುಸೂಕ್ತನಿರ್ದೇಶನ ನೀಡುವಂತೆ ಮನವಿ ಮಾಡಲಾಯಿತು. ಕೆ.ಪಿ.ಭೂತಯ್ಯ, ಜಿಲ್ಲಾಧ್ಯಕ್ಷ ಬಸ್ತಿಹಳ್ಳಿ ಸುರೇಶ್ ಬಾಬು, ತಾಲ್ಲೂಕು ಅಧ್ಯಕ್ಷ ಧನಂಜಯ.ಆರ್, ಚೇತನ ಯಳನಾಡು, ತಿಪ್ಪೇಸ್ವಾಮಿ ಮಲ್ಲಾಪುರ, ರಂಗಸ್ವಾಮಿ ಪ್ರಭು ಇಸಾಮುದ್ರ, ಕಾಂತರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್


### ಲೋಕಾಯುಕ್ತ ಅಧಿಕಾರಿಗಳಿಂದ ಅಹವಾಲು ಸ್ವೀಕಾರ

» **ಚಿತ್ರದುರ್ಗ**

ಮೇ 23 ಮತ್ತು 24 ರಂದು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ತಾಲ್ಲೂಕುಗಳಲ್ಲಿ ಖುದ್ದಾಗಿ ಲೋಕಾಯುಕ್ತ ಅಧಿಕಾರಿಗಳು ಭೇಟಿ ನೀಡಿ ಸಾರ್ವಜನಿಕರಿಂದ ದೂರು ಹಾಗೂ ಅವಹಾಲುಗಳನ್ನು ಸ್ವೀಕರಿಸಲಿದ್ದಾರೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸ ಮಾಡಿಕೊಡಲು ಲಂಚಕ್ಕಾಗಿ ಬೇಡಿಕೆ, ಯೋಜನೆಗಳ ಅನುಷ್ಠಾನದಲ್ಲಿ ಅನಗತ್ಯ ವಿಳಂಬ, ಕರ್ತವ್ಯದಲ್ಲಿ ನಿರ್ಲಕ್ಷತನ, ತಾರತಮ್ಯ, ಅರ್ಹ ಫಲಾನುಭವಿಗಳಿಗೆ ಸರ್ಕಾರದ ಯೋಜನೆಗಳ ಲಾಭ ಸರಿಯಾದ ರೀತಿಯಲ್ಲಿ ತಲುಪಿಸದೇ ಇರುವ ಕುರಿತು ಸಾರ್ವಜನಿಕರು ನಿಗದಿತ ಅರ್ಜಿ ನಮೂನೆಯಲ್ಲಿ ದೂರು ಸಲ್ಲಿಸಬಹುದು. ಮೇ.23ರ ಗುರುವಾರದಂದು ಬೆಳಿಗ್ಗೆ 10 ರಿಂದ 1 ಗಂಟೆಯವರೆಗೆ ಹೊಸದುರ್ಗ, ಮೊಳಕಾಲ್ಮೂರು, ತಾಲ್ಲೂಕು ಕಚೇರಿಗಳಲ್ಲಿ ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 5ರವರೆಗೆ ಹೊಳಲ್ಕೆರೆ ಮತ್ತು ಚಳ್ಳಕೆರೆ ತಾಲ್ಲೂಕು ಕಚೇರಿಗಳಲ್ಲಿ ಅಹವಾಲು ಸ್ವೀಕರಿಸಲಿದ್ದಾರೆ. ಮೇ.24 ರಂದು ಬೆಳಿಗ್ಗೆ 10 ರಿಂದ 1 ಗಂಟೆಯರವರೆಗೆ ಹಿರಿಯೂರು ಹಾಗೂ ಮದ್ಯಾಹ್ನ 2.30 ರಿಂದ ಸಂಜೆ 5ರವರೆಗೆ ಚಿತ್ರದುರ್ಗ ತಾಲ್ಲೂಕು ಕಚೇರಿಗಳಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ ಎಂದು ಕರ್ನಾಟಕ ಲೋಕಾಯುಕ್ತ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶ್ರೀವೀರಭದ್ರಸ್ವಾಮಿ ಜಾತ್ರೆ: ಒಡಹುಟ್ಟಿದವರು ಸಾಮಾಜಿಕ ನಾಟಕ ಪ್ರದರ್ಶನ 22ರಂದು

» **ಚಳ್ಳಕೆರೆ**



ನಗರದ ಆಂಜನೇಯಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ಬಿಎಂ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಶ್ರೀವೀರಭದ್ರಸ್ವಾಮಿ ಜಾತ್ರೆ ಪ್ರಯುಕ್ತ ಮೇ.22ರ ಬುಧವಾರ ರಾತ್ರಿ 7.30ಕ್ಕೆ ಒಡಹುಟ್ಟಿದವರುಅರ್ಥಾತ್ ಒಗ್ಗಟ್ಟು ಕುಟುಂಬದ ಗುಟ್ಟು ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ನಗರದ ಕಲಾವಿದ ಬಂಧುಗಳು ಆಗಮಿಸಿ ನಾಟಕವನ್ನು ವೀಕ್ಷಿಸಿ ಕಲಾವಿದರನ್ನು ಪ್ರೋತ್ಸಾಹಿಸುವಂತೆ ಮನವಿ ಮಾಡಲಾಗಿದೆ. ಕ್ಷೇತ್ರದ ಶಾಸಕ ಟಿ.ರಘುಮೂರ್ತಿ, ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ, ಮಾಜಿ ಸಚಿವ ಎಚ್.ಆಂಜನೇಯ, ಚಿತ್ರದುರ್ಗ ಕ್ಷೇತ್ರದ ಶಾಸಕ ಕೆ.ಸಿ.ವೀರೇಂದ್ರ(ಪಪ್ಪಿ) ಮುಖ್ಯ ಅತಿಥಿಗಳಾಗಿ ಆಗಮಿಸುವರು ಎಂದು ವ್ಯವಸ್ಥಾಪಕರು ತಿಳಿಸಿದ್ಧಾರೆ.

### ಜಿಟಿಟಿಸಿ: ಅರ್ಜಿ ಅಹ್ವಾನ

» **ಚಿತ್ರದುರ್ಗ**

ಚಿತ್ರದುರ್ಗದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) 2024–25ನೇ ಸಾಲಿನ ಪ್ರವೇಶಾತಿ ಆರಂಭವಾಗಿದೆ. ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್ (DTDM) ಹಾಗೂ ಡಿಪ್ಲೊಮಾ ಇನ್ ಮೆಕಾಟ್ರಾನಿಕ್ಸ್ (DMCH) ಮತ್ತು ಡಿಪ್ಲೊಮಾ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ (ಆಇಅ) ಕೋರ್ಸುಗಳ ಪ್ರವೇಶ ಪಡೆಯಲು ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವೆಬ್‌ಸೈಟ್‌ನಲ್ಲಿ cetonline.karnataka.gov.in/kea ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದೆ. ಆನ್‌ಲೈನ್ ಅರ್ಜಿ ಸಲ್ಲಿಕೆ ಮೇ 13ರಿಂದ ಪ್ರಾರಂಭವಾಗಿದ್ದು, ಮೇ.27 ಅರ್ಜಿ ಸಲ್ಲಿಸಲು ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಚಿತ್ರದುರ್ಗ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಸರ್ವೇ ಸಂಖ್ಯೆ 44, ಹಳೆಯ ಬೆಂಗಳೂರು ರಸ್ತೆ, ಕಣಿವೆ ಮಾರಮ್ಮದೇವಸ್ಥಾನದಹಿಂಭಾಗ,ಕುಂಚಿಗನಹಾಳ್ ಚಿತ್ರದುರ್ಗ, ದೂರವಾಣಿ ಸಂಖ್ಯೆ: 9738465834, 9481866855 ಗೆ ಸಂಪರ್ಕಿಸಬಹುದು ಎಂದು ಚಿತ್ರದುರ್ಗ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಪ್ರಾಂಶುಪಾಲರು ತಿಳಿಸಿದ್ದಾರೆ.

### ಐಟಿಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

» **ದಾವಣಗೆರೆ**

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಚನ್ನಗಿರಿ ಇಲ್ಲಿ ಐಟಿಐ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಈ ಸಂಸ್ಥೆ ಎನ್‌ಸಿವಿಟಿ ಯಿಂದ ಸಂಯೋಜನೆ ಪಡೆದ ಎಲೆಕ್ಟ್ರೀಷಿಯನ್, ಫಿಟ್ಟರ್, ಎಂ.ಆರ್&ಎಸಿ, ಎಂ.ಇ.ವಿ ಮತ್ತು ಅಡ್ವಾನ್ಸ್ ಸಿ ಎನ್ ಸಿ ವೃತ್ತಿಗಳಿದ್ದು ಈ ವೃತಿಗಳಿಗೆ ಸರ್ಕಾರಿ ಐ.ಟಿ.ಐ, ಚನ್ನಗಿರಿಯಲ್ಲಿ ಅಥವಾ ಹತ್ತಿರದ ಸೈಬರ್ ಸೆಂಟರ್ ನಲ್ಲಿ ಛಿಣಜ ಇಚಿಡಿಟಿಚಿಣಚಿಞಚಿ.ರಿಂತಿ.ಟಿ ವೆಬ್ ಸೈಟ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಚನ್ನಗಿರಿ ದೂ.ಸಂ: 9844710844 ಮತ್ತು 9738782540 ಸಂಪರ್ಕಿಸಬಹುದೆಂದು ತರಬೇತಿ ಅಧಿಕಾರಿ ಮನೋಹರ್.ಹೆಚ್ ತಿಳಿಸಿದ್ದಾರೆ.

# ಹೊಸದುರ್ಗ: 120.6 ಸೆ.ಮೀ ಮಳೆ

» **ಮೊದಲ ಪುಟದಿಂದ**










ಹೆಚ್ಚುನೀರುಹರಿಯುತ್ತಿವರುಕಡೆಯಾರೂ ಸಹಾ ಸಾಹಸ ಮಾಡಿ ಹೋಗುವುದಾಗಲಿ ಅಥವಾ ರಸ್ತೆ ದಾಟುವುದಾಗಲಿ ಮಾಡಬಾರದು,ನಾವುಗಳು ಈಗಾಗಲೆ ತಾಲೂಕಿನ ಎಲ್ಲಾ ಹೋಬಳಿಯ ಹಾನಿಯಾಗಿರುವ ಪ್ರದೇಶಗಳಿಗೆ ಬೇಟಿ ನೀಡಿ ಸೂಕ್ತ ಕ್ರಮಗಳನ್ನ ಕೈಗೊಳ್ಳಲಾಗುತ್ತಿದೆ ಎಂದು ತಾ.ಪಂ.ಇ.ಓ ಸುನೀಲ್‌ಕುಮಾರ್ ತಿಳಿಸಿದ್ದಾರೆ.

ಮನೆ ಹಾನಿ:ತಾಲೂಕಿನ ಶ್ರೀರಾಂಪುರ ಹೋಬಳಿಯ ಯಾದಘಟ್ಟ ಗ್ರಾಮದ ಕುಬೇರಪ್ಪ, ಕಸಬಾ ಹೋಬಳಿಯ ಹೋನ್ನೇಕೆರೆ ಗ್ರಾಮದ ಪುಟ್ಟರಾಜ ಹಾಗೂ ಕಸಬಾ ಹೋಬಳಿಯ ಕುಂಬಾರಕಟ್ಟೆ ಗ್ರಾಮದ ಸರೋಜಮ್ಮ ಮತ್ತು ಹೊನ್ನೇನಹಳ್ಳಿ ಗ್ರಾಮದ ಮಾಜಿ ಗ್ರಾಮ ಪಂಚಾಯತಿ ಸದಸ್ಯರೊಬ್ಬರಿಗೆ ಸೇರಿದ ವಾಸದ ಮನೆಗಳು ಸಂಪೂರ್ಣವಾಗಿ ಕುಸಿದು ಬಿದ್ದಿದ್ದು ಯಾವುದೇ ರೀತಿಯ ಪ್ರಾಣಾಪಾಯವಾಗಿರುವುದಿಲ್ಲ ಎಂದು ತಿಳಿದು ಬಂದಿದ್ದು ಇನ್ನುಳಿದ ಕೆಲವು ಗ್ರಾಮಗಳಲ್ಲಿ ಕೆಲವಾರು ಮನೆಗಳು ಕುಸಿದು ಬಿದ್ದಿರುವ ವರದಿಗಳು ಬಂದಿವೆ.

ಬೆಳೆ ಹಾನಿ: ತಾಲೂಕಿನ ಮಾಡದಕೆರೆ ಹೋಬಳಿಯ ನಾಕಿಕೆರೆ ಗ್ರಾಮದ ಜಯ್ಯಮ್ಮ ಕೋಂ ಸಿದ್ದಪ್ಪ ಎಂಬುವವರ ಬಾಳೆ ಬೆಳೆ ನೆಲಕ್ಕುರುಳಿ ಸುಮಾರು 40 ಸಾವಿರ, ಕೆಂಚಮ್ಮ ಕೋಂ ತಿಪ್ಪಣ್ಣ ಎಂಬುವವರ ಬಾಳೆ ಬೆಳೆ ನೆಲಕ್ಕುರುಳಿ 1 ಲಕ್ಷ, ಶಿವಣ್ಣ ಬಿನ್ ಭೈರಪ್ಪ ಎಂಬುವವರ ಬಾಳೆ ಬೆಳೆ ನೆಲಕ್ಕುರುಳಿ ಸುಮಾರು 75 ಸಾವಿರ, ಹಾಗೂ ಶ್ರೀರಾಂಪುರದ ರತ್ನಮ್ಮ ಕೋಂ ಎಂಬುವವರ ಬಾಳೆ ಬೆಳೆ ನೆಲಕ್ಕುರುಳಿ ಸುಮಾರು 15 ಸಾವಿರ ನಷ್ಟವಾಗಿರುವಾಗಿರುವುದಾಗಿ ತಹಶಿಲ್ದಾರ್ ತಿರುಪತಿಪಾಟೀಲ್ ಮಾಹಿತಿ ನೀಡಿದ್ದಾರೆ.

ಶನಿವಾರ ಬಂದ ಮಳೆಯ ವಿವರ: ಹೊಸದುರ್ಗ 120.6 ಸೆ.ಮೀ, ಬಾಗೂರು 40.3 ಸೆ.ಮೀ,ಮಾಡದಕೆರೆ 51.2 ಸೆ.ಮೀ, ಮತ್ತೋಡು 14.4 ಸೆ.ಮೀ ಹಾಗೂ ಶ್ರೀರಾಂಪುರ 15.0 ಸೆ.ಮೀ ಮಳೆಯಾಗಿರುವ ಬಗ್ಗೆ ವರದಿಯಾಗಿದೆ.

# ಸಮಾಜದ ಬದಲಾವಣೆಗೆ ಸಂಕಲ್ಪ ಮಾಡಿದ ಮಹಾನ್ ವ್ಯಕ್ತಿ ಗೌತಮ ಬುದ್ಧ

» **ಚಳ್ಳಕೆರೆ**



ಪ್ರತಿಯೊಬ್ಬ ವ್ಯಕ್ತಿಯಲ್ಲೂ ಆಜ್ಞಾನದ ಕತ್ತಲನ್ನು ಹೋಗಲಾಡಿಸಿ ಜ್ಞಾನದ ಬೆಳಕು ನೀಡಿದ ಕೆಲವೇ ಕೆಲವು ಮಹಾನೀಯರಲ್ಲಿ ಗೌತಮಬುದ್ದರು ಒಬ್ಬರು. ಅವರು, ತಮ್ಮ ರಾಜವೈಭೋಗಗಳನ್ನು ತೊರೆದು ಮಾನವೀಯ ಗುಣಗಳನ್ನು ಬಿತ್ತುವ ನಿಟ್ಟಿನಲ್ಲಿ ಜೈನಧರ್ಮವನ್ನು ಸ್ವೀಕರಿಸಿ ಗೌತಮಬುದ್ಧರಾದರು. ಬುದ್ಧವೆಂದರೆ ಜ್ಞಾನದ ಸಂಕೇತವೆಂದು ಹಿರಿಯ ಸಂಶೋಧಕ ಡಾ.ಬಿ.ರಾಜಶೇಖಪ್ಪ ತಿಳಿಸಿದರು.

ಅವರು, ಭಾನುವಾರ ನಗರದ ಅವನಿ ಖಾಸಗಿ ಅತಿಥಿ ಗೃಹದಲ್ಲಿ ಲೇಖಕ, ಚಿಂತಕ ಜಿ.ವಿ.ಆನಂದಮೂರ್ತಿ ರಚಿಸಿದ ಬುದ್ದನ ಕಥೆಗಳು ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು. ಕಳೆದ ಹಲವಾರು ದಶಕಗಳಿಂದ ಜಿ.ವಿ.ಆನಂದಮೂರ್ತಿಯವರು ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೆ ವಿಶೇಷ ಛಾಪು ಉಂಟು ಮಾಡಿದ್ದಾರೆ. ಇಂದು ಅವರ ಬರವಣಿಗೆಯಲ್ಲಿ ಮೂಡಿಬಂದ ಬುದ್ದ ಕಥೆಗಳು ಪುಸ್ತಕ ಅವಲೋಕಿಸಿದರೆ ಬುದ್ದ ಈ ನಾಡಿಗೆ ಸಲ್ಲಿಸಿದ ಅಪಾರ ಸೇವೆಯ ಬಗ್ಗೆ ಎಲ್ಲರೂ ಚಕಿತಗೊಳ್ಳುತ್ತಾರೆ. ಕಾರಣ ವೈಭೋಗದ ಜೀವನವನ್ನು ಕೈಬಿಟ್ಟು ಸಾಮಾನ್ಯನಂತೆ ಜ್ಞಾನದ ಮೆಟ್ಟಿನಲ್ಲು ಏರಿದ ಮೊಟ್ಟಮೊದಲ ಮಹಾನ್ ವ್ಯಕ್ತಿಎಂದರೆ ಗೌತಮಬುದ್ದ ಮಾತ್ರ. ನಾವೆಲ್ಲರೂ ಗೌತಮಬುದ್ದರ ಆದರ್ಶಗಳನ್ನು ಮೈಗೂಡಿಸಿಕೊಂಡು ನಡೆಯೋಣವೆಂದರು. ಹಿರಿಯ ಪತ್ರಕರ್ತ ಹಾಗೂ ಸಿನಿಮಾಇತಿಹಾಸಕಾರ ದೊಡ್ಡಹಲ್ಲೂರು ರುಕ್ಕೋಜಿ ಮಾತನಾಡಿ, ಸಮಾಜದಲ್ಲಿ ಹಲವಾರು ಬದಲಾವಣೆಗಳನ್ನು ಕಾಣಲು ಕೆಲವು ವೈಶಿಷ್ಟಪೂರ್ಣ ವ್ಯಕ್ತಿಗಳು ಕಾರಣಕರ್ತರಾಗಿದ್ದಾರೆ. ಯಾವುದೇ ಸ್ವಾರ್ಥವನ್ನು ಬಯಸದೆ ನಿಸ್ವಾರ್ಥದಿಂದ ಸಮಾಜದ ಉನ್ನತ್ತಿಗಾಗಿ ಶ್ರಮಿಸಿದ್ಧಾರೆ. ಪ್ರತಿಯೊಬ್ಬ ವ್ಯಕ್ತಿಯನ್ನು ಬದಲಾವಣೆ ಮಾಡುವುದು ಕಷ್ಟಸಾಧ್ಯ. ಆದರೆ, ಗೌತಮಬದ್ದರು ಮಾತ್ರ ಅವರದ್ದೇಯಾದ ತತ್ವಾದರ್ಶಗಳಿಂದ ಸಮಾಜದ ಬದಲಾವಣೆಗೆ ನಾಂದಿಯಾಡಿದರು ಎಂದರು.

ಖ್ಯಾತವಿಚಾರವಾದಿ ಡಾ.ಎಚ್.ಆರ್.ಸ್ವಾಮಿ, ಲೇಖಕ ಜಿ.ವಿ.ಆನಂದಮೂರ್ತಿ, ಎನ್.ಆರ್.ತಿಪ್ಪೇಸ್ವಾಮಿ, ನಿಸರ್ಗಗೋವಿಂದರಾಜು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಹೊಸ ಡಯಾಲಿಸಿಸ್ ಕೇಂದ್ರ ಪ್ರಾರಂಭ



**ಚಿತ್ರದುರ್ಗ:** ನಗರದ ಜಿಲ್ಲಾಸ್ಪತ್ರೆಯಲ್ಲಿ ಫೆಬ್ರುವರಿ 5 ರಿಂದ ಅಂತರಾಷ್ಟ್ರೀಯ ಗುಣಮಟ್ಟದ 15 ಹೊಸ ಡಯಾಲಿಸೀಸ್ ಯಂತ್ರಗಳೊಂದಿಗೆ ಡಯಾಲಿಸೀಸ್ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಎಲ್ಲಾ ನೊಂದಾಯಿತ ರೋಗಿಗಳಿಗೆ ಉಚಿತವಾಗಿ ಹಾಗೂ ಪ್ರತಿಯೊಬ್ಬ ರೋಗಿಗೂ ಪ್ರತ್ಯೇಕಾವಾದ ಡಿಸ್ಪೋಸಿಬಲ್ ಡಯಾಲೈಸರ್ ಬಳಸಲಾಗುತ್ತದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ರವೀಂದ್ರ.ಎಸ್.ಪಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 2 ದಿನದ ಮಳೆಗೆ ಭರ್ತಿಯಾದ ಕೆಲ್ಲೋಡು ವೇದಾವತಿ

**ಜನರ ಮುಖದಲ್ಲಿ ಬೀರುತ್ತಿರುವ ಮಂದಹಾಸದ ನಗೆ**



» **ನಾಗತಿಹಳ್ಳಿಮಂಜುನಾಥ್**

ಹೊಸದುರ್ಗ: ಕಳೆದ ಸುಮಾರು ಒಂದು ವರ್ಷದಿಂದಲೂ ಸಹಾ ಸರಿಯಾದ ಸಮಯಕ್ಕೆ ಮಳೆ ಇಲ್ಲದೆ ಕಂಗಾಲಾಗಿದ್ದ ತಾಲೂಕಿನ ಜನತೆಗೆ ಈಗ ಮುಖದಲ್ಲಿ ನಗು ಕಾಣಿಸುತ್ತಿದೆ ಕಳೆದ ಎರಡು ದಿನಗಳ ಹಿಂದೆಯಷ್ಟೆ ಅಂದರೆ ಶುಕ್ರವಾರ ಮತ್ತು ಶನಿವಾರ ಸತತವಾಗಿ ಎರಡು ದಿನಗಳ ಕಾಲ ತಾಲೂಕಿನಾಧ್ಯಂತ ಸಂವೃದ್ದ ಮಳೆಯಾಗಿದೆ ಇದರಿಂದ ರೈತಾಪಿ ವರ್ಗಕ್ಕಂತು ಸ್ವರ್ಗಕ್ಕೆ ಮೂರೇ ಗೇಣು ಎನ್ನುವಂತಾಗಿದೆ ಅದರಲ್ಲೂ ಹೊಸದುರ್ಗ ಪಟ್ಟಣಕ್ಕೆ ನೀರು ಒದಗಿಸುವ ಎಕೈಕ ನದಿ ಎಂದರೆ ಅದು ತಾಲೂಕಿನ ಕೆಲ್ಲೋಡು ಬಳಿ ಇರುವ ವೇದಾವತಿ ಈ ವೇದಾವತಿ ನದಿ ಕಳೆದ ಹದಿನೈದು ದಿನಗಳ ಹಿಂದೆಯಷ್ಟೆ ಖಾಲಿ ಖಾಲಿಯಾಗಿ ಕಾಣತಿತ್ತು ಆದರೆ ಕಳೆದ ಎರಡು ದಿನಗಳ ಹಿಂದೆಯಷ್ಟೆ ಸತತವಾಗಿ ಮಳೆ ಬಂದ ಪರಿಣಾಮ ಕೇವಲ ಎರಡೇ ದಿನಕ್ಕೆ ವೇದವತಿ ಭರ್ತಿಯಾಗಿ ನೀರು ಬ್ಯಾರೇಜ್ ಮೇಲೆ ಹರಿಯುತ್ತಿರುವುದನ್ನು ನೋಡಿದರೆ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ ಇದೀಗ ಹರಿದು ಬರುತ್ತಿರುವ ನೀರಿನಲ್ಲಿ ಇಳಿದು ಸಾರ್ವಜನಿಕರು ಸಂತಸ ಪಡುತ್ತಿದ್ದಾರೆ. ಈ ವೇದಾವತಿ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಹೊಸದುರ್ಗ ಪಟ್ಟಣಕ್ಕೆ ನೀರು ಸರಬರಾಜು ಮಾಡುವುದು ಕಷ್ಟದ ಕೆಲಸವೇನಲ್ಲ ಎನ್ನುವಂತಾಗಿದ್ದು ಈಗ ವೇದಾವತಿ ನದಿ ಭರ್ತಿಯಾಗಿರುವುದು ಒಂದು ಪವಾಡವೇ ನಡೆದಂತಾಗಿದೆ.ಇದರಿಂದ ನದಿಯ ಹಾಸು ಪಾಸಿನಲ್ಲಿರುವ ರೈತರು ಹರ್ಷ ಚಿತ್ತರಾಗಿದ್ದಾರೆ. ತಾಲ್ಲೂಕಿನ ಜೀವನಾಡಿಯಾದ ವೇದಾವತಿ ನದಿಯು ಹರಿದು ವಾಣಿ ವಿಲಾಸ ಸಾಗರ ಸೇರಿ ಜಿಲ್ಲೆಯ ಬಹುತೇಕ ರೈತರಿಗೆ ಬೆಳೆ ಬೆಳೆಯಲು ಹಾಗೂ ಸಾರ್ವಜನಿಕರಿಗೆ ಕುಡಿಯುವ ನೀರಿನ ಪೂರೈಕೆಗೆ ಅನುಕೂಲವಾಗಿದ್ದು. ಪ್ರಸ್ತುತ ಸಾಲಿನಲ್ಲಿ ಸರಿಯಾಗಿ ಮಳೆಯಾಗದೆ ಹೊಸದುರ್ಗ ತಾಲ್ಲೂಕನ್ನು ಬರ ಪೀಡಿತ ತಾಲ್ಲೂಕು ಎಂದು ಸರ್ಕಾರ ಘೋಷಣೆ ಮಾಡಿತ್ತು.ಉತ್ತಮ ಮಳೆ ಆದ ಕಾರಣ ಕೆಲ್ಲೋಡು ಬ್ಯಾರೆಜ್ ಸೇರಿ ಆಲಗಟ್ಟ, ಬಲ್ಲಾಳಸಮುದ್ರ, ಕಾರೆಹಳ್ಳಿ ಚೆಕ್ ಡ್ಯಾಮ್‌ಗಳು ಭರ್ತಿಯಾಗಿ ಹರಿದು ವಾಣಿ ವಿಲಾಸ ಸಾಗರ ಡ್ಯಾಮ್ ಸೇರುತ್ತಿದೆ, ಭಾನುವಾರ ಮದ್ಯಾಹ್ನ 4.15 ರಿಂದ ಪ್ರಾರಂಭವಾದ ಮಳೆ ಸಂಜೆಗೆತ್ತಲಾದರೂ ಸಹಾ ಜಿಟಿ ಜಿಟಿ ಸುರಿಯುತ್ತಲೇ ಇತ್ತು.

## ಪ್ರಮುಖ ಸುದ್ದಿ

# 4ನೇ ಬಾರಿಗೆ ಸ್ಪರ್ಧಿಸಿದ್ದು, ಕ್ಷೇತ್ರದ ಮತದಾರರ ಸಂಕಲ್ಪ

» **ಚಳ್ಳಕೆರೆ**



ಆಗ್ನೇಯ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಚುನಾವಣೆಗೆ ನಾಲ್ಕನೇ ಬಾರಿಗೆ ನಾನು ಸ್ಪರ್ಧಿಸಿದ್ದು, ಕ್ಷೇತ್ರದ ಶಿಕ್ಷಕ ಮತದಾರರ ಸಂಕಲ್ಪ ಹಾಗೂ ಶುಭಹಾರೈಕೆಗಳೊಂದಿಗೆ ಮತ್ತೊಮ್ಮೆ ವಿಧಾನಪರಿಷತ್ ಪ್ರವೇಶಿಸುವ ಸೌಭಾಗ್ಯ ದೊರೆಯಲಿದೆ ಎಂದು ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ, ವಿಧಾನಪರಿಷತ್ ಸದಸ್ಯ ವೈ.ಎ.ನಾರಾಯಣಸ್ವಾಮಿ ತಿಳಿಸಿದರು.

ಅವರು, ನಗರದ ಬಾಪೂಜಿ ಪದವಿಪೂರ್ವ ಕಾಲೇಜಿನಲ್ಲಿ ತಾಲ್ಲೂಕು ಶಿಕ್ಷಕರ ಸ್ನೇಹಕೂಟ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮತಯಾಚನೆ ಮಾಡಿದರು. ಶಿಕ್ಷಕರ ಸಮಸ್ಯೆಗಳು ನಾನಾ ಆಯಾಮವನ್ನು ಹೊಂದಿವೆ. ಓಪಿಎಸ್ ಜಾರಿ ಮಾಡುವಂತೆ ಬೆಂಗಳೂರಿನಲ್ಲಿ ಶಿಕ್ಷಕರು ನಡೆಸಿದ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿ ಸರ್ಕಾರಕ್ಕೆ ತಾಕೀತು ಮಾಡಿದ್ದೇನೆ. ಆದರೆ, ಕೆಲವೊಮ್ಮೆ ಸರ್ಕಾರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಉತ್ಸಾಹ ತೋರುತ್ತಿಲ್ಲ ಎಂದು ಆರೋಪಿಸಿದರು.

ವಿಶೇಷವಾಗಿ ಕಳೆದ ಒಂದು ವರ್ಷದಿಂದ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಶೂನ್ಯವಾಗಿದೆ. ಪ್ರಾಥಮಿಕ, ಪ್ರೌಢ ಶಿಕ್ಷಣದಿಂದ ಹಿಡಿದು ಕಾಲೇಜು, ಸ್ನಾತಕೋತ್ತರ ಶಿಕ್ಷಣದವರೆಗೂ ಸರ್ಕಾರ ಕೈಗೊಂಡಿರುವ ಹಲವಾರು ನಿಯಮಗಳು ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಮಾರಕವಾಗಿವೆ. ಸರ್ಕಾರ ಶಿಕ್ಷಣಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ಈಡೇರಿಸುವಲ್ಲಿ ಸ ಂ ಪ ೂ ರ್ಣ ವಿ ಫ ಲ ವಾ ಗಿ ದ . ವಿಧಾನಪರಿಷತ್‌ನಲ್ಲಿ ಸರ್ಕಾರದ ವಿರುದ್ದ ನಾವು ಎಷ್ಟೇಗಟ್ಟಿಯಾಗಿ ಕೂಗಿದರೂ ಸರ್ಕಾರ ಮಾತ್ರ ನಿರುತ್ತರ ನೀಡುತ್ತದೆ. ಆದ್ದರಿಂದ ಈ ಬಾರಿ ಮತ್ತೊಮ್ಮೆ ನಿಮ್ಮೆಲ್ಲರ ಆಶೀರ್ವಾದ ಬಯಸಿದ್ದೇನೆ, ಮತ್ತೊಮ್ಮೆ ವಿಧಾನಪರಿಷತ್‌ಗೆ ಆಯ್ಕೆಯಾಗಿ ಶಿಕ್ಷಕರ ಸಮಸ್ಯೆಗಳ ನಿವಾರಣೆಗೆ ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆಂದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಬಾಪೂಜಿ ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಜಿ.ಬಾಲರೆಡ್ಡಿ, ಶಿಕ್ಷಕರ ಸ್ನೇಹಕೂಟ ಪಕ್ಷಾತೀತವಾಗಿ ಅಭ್ಯರ್ಥಿಯನ್ನು ಬೆಂಬಲಿಸಬೇಕಿದೆ. ಶಿಕ್ಷಕರ ಸಮಸ್ಯೆಗಳ ಬಗ್ಗೆ ಸಕರಾತ್ಮಕವಾಗಿ ಸ್ಪಂದಿಸುವ ವ್ಯಕ್ತಿ ನಮಗೆ ಬೇಕಿದೆ ಎಂದರು. ವೇದಿಕೆಯಲ್ಲಿ ನಿವೃತ್ತ ಪ್ರಾಂಶುಪಾಲ ಜಿ.ಕೆ.ವೆಂಕಟರೆಡ್ಡಿ, ನಜೀರ್‌ಆಹಮದ್, ಯೆಂಜಾರಪ್ಪ, ಶ್ರೀನಿವಾಸ್‌ಮೂರ್ತಿ, ಟಿ.ತಿಪ್ಪಮ್ಮ, ರಾಮರೆಡ್ಡಿ, ಸುಭಾನ್, ನಾಗರಾಜು, ಓಬಣ್ಣ, ಶಾಂತವೀರಪ್ಪ, ನಜೀರುಲ್ಲಾ, ತಿಪ್ಪೇಸ್ವಾಮಿ, ಅಂಜಿನಪ್ಪ, ಆಹಮ್ಮದ್, ಕೆ.ಚಿತ್ತಯ್ಯ ಮುಂತಾದವರು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ಬೆಳೆವಿಮೆ ನಮೂದಿಸುವಲ್ಲಿ ಲೋಪ: ಕ್ರಮ ಕೈಗೊಳ್ಳಿ

» **ಚಳ್ಳಕೆರೆ**

ತಾಲ್ಲೂಕಿನ ಅಖಂಡ ಕರ್ನಾಟಕ ರೈತ ಸಂಘ ಸಿದ್ದೇಶ್ವರದುರ್ಗ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಬೆಳೆ ವಿಮೆಗೆ ಸಂಬಂಧಪಟ್ಟಂತೆ ಜಿಪಿಎಸ್ ಮಾಡುವ ಸಂದರ್ಭದಲ್ಲಿ ಲೋಪವೆಸಗಿದ್ದ ಬಗ್ಗೆ ಕ್ರಮ ಕೈಗೊಂಡು ರೈತರಿಗೆ ನ್ಯಾಯಒದಗಿಸಬೇಕೆಂದು ತಹಶೀಲ್ದಾರ್‌ಗೆ ಮನವಿ ನೀಡಲಾಗಿದೆ. ತಾಲ್ಲೂಕು ಅಧ್ಯಕ್ಷ ಚಿಕ್ಕಣ್ಣ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಉತ್ತಮ ಮಳೆಯಾಗುತ್ತಿದ್ದ ರೈತ ಕೃಷಿ ಚಟುವಟಿಕೆಯಲ್ಲಿ ನಿರಂತನಾಗಿದ್ದಾನೆ. ಆದರೆ, ಸರ್ಕಾರದಿಂದ ರೈತರಿಗೆ ಬೆಳೆವಿಮೆ, ಬೆಳೆನಷ್ಟ ಪರಿಹಾರ ಖಾತೆಗೆ ಜಮಾವಾಗಿದ್ದು, ಅವುಗಳನ್ನು ಕೆಲವು ಬ್ಯಾಂಕ್‌ನ ವ್ಯವಸ್ಥಾಪಕರು ರೈತರ ಸಾಲಕ್ಕೆ ಜಮಾ ಮಾಡಿಕೊಳ್ಳುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಸೂಚನೆ ಇದ್ದರೂ ಸಹ ಅದರ ಪಾಲನೆಯಾಗುತ್ತಿಲ್ಲ, ಆದ್ದರಿಂದ ಈಬಗ್ಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ರೈತ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

### ಸಮನ್ವಯ ಸಮಿತಿ ಸಭೆ

» **ಚಿತ್ರದುರ್ಗ**

ಜಿಲ್ಲೆಯಲ್ಲಿ ಡೆಂಗೀ, ಚಿಕುಂಗುನ್ಯಾ ನಿಯಂತ್ರಣ ಮತ್ತು ರಾಷ್ಟ್ರೀಯ ಡೆಂಗೀ ದಿನದ ಅಂಗವಾಗಿ ಇದೇ ಮೇ.23ರಂದು ಬೆಳಿಗ್ಗೆ 11ಕ್ಕೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆ ಕರೆಯಲಾಗಿದೆ.

# ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆ ವಿಧಿಸಲು ಆಗ್ರಹ

» **ದಾವಣಗೆರೆ**

ರಾಜ್ಯದಲ್ಲಿ ನಡೆದ ಕೊಪ್ಪಳ ಜಿಲ್ಲಾ ಕಿನ್ನಾಳ ಗ್ರಾಮದ ಅಪ್ರಾಪ್ತೆ ಬಾಲಕಿ ಅನುಶ್ರೀ ಮೇಲಿನ ವಾಮಾಚಾರದ ಬಲಿ, ಹುಬ್ಬಳ್ಳಿ ನಗರದ ನೇಹಾ ಹಿರೇಮಠ್ ಮತ್ತು ಅಂಜಲಿ ಅಂಬಿಗರ ಇವರನ್ನು ಹತ್ತೆಗೈದ ಆರೋಪಿಗಳನ್ನು ಹಾಗೂ ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ದೇವನೂರು ಗ್ರಾಮದ ಅರ್ಜುನಪ್ಪ ಹಣಮಂತನ ಮೇಲೆ ಹಲ್ಲೆ ಮಾಡಿರುವ ಹಲ್ಲೇಕೋರರನ್ನು ಗಲ್ಲು ಶಿಕ್ಷೆಗೆ ಗುರಿ ಪಡಿಸಲು ಒತ್ತಾಯಿಸಿ ದಾವಣಗೆರೆ ಜಿಲ್ಲಾ ಮಡಿವಾಳ ಮಾಚಿದೇವ ಸಂಘವು ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿತು.




ನಗರದ ಜಯದೇವ ವೃತ್ತದಿಂದ ದಾವಣಗೆರೆ ಉಪ ವಿಭಾಗಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಉಪ ವಿಭಾಗಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದ ಮಡಿವಾಳ ಸಮುದಾಯದ ಪದಾಧಿಕಾರಿಗಳು ರಾಜ್ಯದ ಮುಖ್ಯ ಮಂತ್ರಿಗಳಿಗೆ ರವಾನಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಕಾರ್ಯಾಧ್ಯಕ್ಷ ಹೆಚ್.ಜಿ.ಉಮೇಶ್, ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕಾನೂನು ಸುವ್ಯವಸ್ಥೆ ಹದಗೆಡುತ್ತಿದ್ದು, ಅತ್ಯಾಚಾರ, ಕೊಲೆಯಂತಹ ಪ್ರಕರಣಗಳು ಹೆಚ್ಚಾಗುತ್ತಿವೆ. ಕೊಪ್ಪಳ ಜಿಲ್ಲಾ ಕಿನ್ನಾಳ ಗ್ರಾಮದ ಅಪ್ರಾಪ್ತೆ ಬಾಲಕಿ ಅನುಶ್ರೀ ಮೇಲೆ ವಾಮಾಚಾರ ಮಾಡಿ, ಆಕೆಯನ್ನು ಕತ್ತು ಕೊಯ್ದು ಅಮಾನುಷವಾಗಿ ಕೊಲೆ ಮಾಡಲಾಗಿದೆ. ಅದರಲ್ಲೂ ಮಹಿಳೆಯರ ಮೇಲಿನ ದೌರ್ಜನ್ಯ, ಹತ್ಯೆ ಹೆಚ್ಚಾಗುತ್ತಿವೆ. ಪ್ರೀತಿಯ ಹೆಸರಿನಲ್ಲಿ ಹುಬ್ಬಳ್ಳಿಯ ನೇಹಾ ಹಿರೇಮಠ್ ಅವರನ್ನು ಕಾಲೇಜು ಆವರಣದಲ್ಲಿ ದುಷ್ಕರ್ಮಿ ಫಯಾಜ್ ಹಲವಾರು ಬಾರಿ ಚಾಕುವಿನಿಂದ ಇರಿದುಕೊಲೆ ಮಾಡಿದ್ದು, ಇಡೀ ರಾಜ್ಯವೇ ಭಯಪಡುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇದಲ್ಲದೇ ಹುಬ್ಬಳ್ಳಿಯಲ್ಲೇ ವಿಶ್ವ ಎಂಬಾತ ಅಂಜಲಿ ಅಂಬಿಗರ ಎನ್ನುವ ಯುವತಿಯನ್ನು ಕೊಲೆ ಮಾಡಿ, ಪರಾರಿಯಾಗುವ ವೇಳೆ ದಾವಣಗೆರೆ ಸಮೀಪದ ಮಾಯಕೊಂಡ ರೈಲ್ವೆ ನಿಲ್ದಾಣದಲ್ಲಿ ಮಹಿಳೆಯೊಬ್ಬಳ ಮೇಲೆ ಹತ್ಯೆಗೆ ಯತ್ನಿಸಿ, ಪ್ರಯಾಣಿಕರ ಸಹಕಾರದಿಂದ ರೈಲ್ವೆ ಪೊಲೀಸರಿಗೆ ಸಿಕ್ಕು ಬಿದ್ದಿದ್ದು, ಇದೀಗ ಪ್ರಕರಣ ತನಿಖೆ ನಡೆಯುತ್ತಿದೆ. ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಸೂರ್ಲಬ್ಬಿ ಬಳಿಯ ಕುಂಬಾರಗಡಿಗೆ ಗ್ರಾಮದಲ್ಲಿ ಕೆಲ ದಿನಗಳ ಹಿಂದೆ ಎಸ್‌ಎಸ್‌ಎಲ್ಸಿ ವಿದ್ಯಾರ್ಥಿನಿ ಮೀನಾ ಕೊಲೆ ನಡೆದಿತ್ತು. ನಂತರ ಪೊಲೀಸರು ಆರೋಪಿಯನ್ನು ಬಂಧಿಸಿ, ತನಿಖೆ ನಡೆಸುತ್ತಿದ್ದಾರೆ. ಇದೇ ರೀತಿ ರಾಜ್ಯದಲ್ಲಿ ಹಲವಾರು ಹಲ್ಲೆ, ಅತ್ಯಾಚಾರ, ಹತ್ಯೆಯಂತಹ ಪ್ರಕರಣಗಳು ಪದೇಪದೇ ನಡೆಯುತ್ತಿದ್ದರೂ ಸಹ ರಾಜ್ಯದ ಗೃಹ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂದರು.

ಕಲಬುರುಗಿ ಜಿಲ್ಲೆಯ ಸೇಡಂ ತಾಲೂಕಿನ ದೇವನೂರು ಗ್ರಾಮದಲ್ಲಿ ಸೆಕೆಂಡ್ ಹ್ಯಾಂಡ್ ಕಾರು ಮಾರಾಟ ಮಾಡಿ ಜೀವನ ನಡೆಸುತ್ತಿದ್ದ ಅರ್ಜುನ್ ಹಣುಮಂತಪ್ಪ, ಮಹಮ್ಮದ್ ಸಮೀರುದ್ದೀನ್, ಅಬ್ದುಲ್ ರೆಹಮಾನ್ ಎಂಬಾತರನ್ನು ಕೊಠಡಿಯೊಂದರಲ್ಲಿ ಕೂಡಿ ಹಾಕಿದ್ದಲ್ಲದೇ ಅವರನ್ನು ವಿವಸ್ತ್ರಗೊಳಿಸಿ, ಗುಪ್ತಾಂಗಕ್ಕೆ ಬಾಟರಿಯಿಂದ ಕರೆಂಟ್ ಶಾಕ್ ನೀಡಿದ ಪ್ರಕರಣ ದಾಖಲಾಗಿದೆ. ಈ ಘಟನೆಯ ವಿಡಿಯೋ ತುಣುಕುಗಳು ರಾಜ್ಯದೆಲ್ಲೆಡೆ ಹರಿದಾಡುತ್ತಿದ್ದು, ಅಮಾನವಿಯವಾದ ರೀತಿಯಲ್ಲಿ ನಡೆದುಕೊಂಡ ಆರೋಪಿಗಳನ್ನು ಕಲಬುರುಗಿಯ ವಿಶ್ವವಿದ್ಯಾನಿಲಯ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಇದೇ ರೀತಿ ರಾಜ್ಯದಲ್ಲಿ ಹಲ್ಲೇ, ದೌರ್ಜನ್ಯ, ಅತ್ಯಾಚಾರ, ಕೊಲೆಯಂತಹ ಪ್ರಕರಣಗಳು ನಡೆಯುತ್ತಿದ್ದು, ರಾಜ್ಯದ ಜನರನ್ನು ಭಯಬೀತರನ್ನಾಗಿ ಮಾಡಿದೆ. ಅದರಲ್ಲೂ, ಯುವತಿಯರು ಮಹಿಳೆಯರು ಮನೆಯಿಂದ ಹೊರಗೆ ಹೋಗಲು ಹೆದರುವ ವಾತಾವರಣ ಸೃಷ್ಟಿಯಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಗೃಹ ಇಲಾಖೆ ಸೂಕ್ತ ರೀತಿಯಲ್ಲಿ ಕಠಿಣ ಕ್ರಮ ಕೈಗೊಳ್ಳುವ ಜೊತೆಯಲ್ಲಿ ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ನಡೆಯದಂತೆ ಸೂಕ್ತ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಬೇಕು. ಇದಲ್ಲದೇ ಈ ಎಲ್ಲಾ ಪ್ರಕರಣಗಳಲ್ಲಿ ಅಮಾನವೀಯ, ವಿಕೃತವಾಗಿ ವರ್ತನೆ ಮಾಡಿರುವ ಎಲ್ಲಾ ಆರೋಪಿಗಳನ್ನು ಗಲ್ಲು ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಹುಲಿಕಟ್ಟೆ ರಾಮಚಂದ್ರಪ್ಪ, ಎಂ.ವೈ.ಸತೀಶ್, ಜಿ.ಕಿಶೋರ್ ಕುಮಾರ್, ಆರ್.ಎನ್. ಮಾರುತಿ, ಅಂಜಿನಪ್ಪ ಪೂಜಾರ್, ಜಿ.ವಿಜಯ ಕುಮಾರ್, ಹನುಮಂತಪ್ಪ, ಕಕ್ಕರಗೊಳ್ಳ ಮಂಜುನಾಥ್, ಅಣಜಿ ಹನುಮಂತಪ್ಪ, ಐಗೂರು ಅಂಜಿನಪ್ಪ, ಅರಸೀಕೆರೆ ಬಸವರಾಜ್, ರವಿ ಚಿಕ್ಕಣ್ಣ, ಮಧುರಾ, ನಾಗಮ್ಮ, ಡೈಮಂಡ್ ಮಂಜುನಾಥ್,ಗೋಪಾಲ್,ಕೃಷ್ಣಮೂರ್ತಿ, ರವಿ, ಬಾತಿ ಶಂಕರ್, ಸುಭಾಷ್, ರಾಜಣ್ಣ, ಎಂ.ಕೆ.ಬಸವರಾಜ್ ಇತರರು ಇದ್ದರು.

## ಬರ-ವಿಮೆಗೆ ತಪ್ಪು ಮಾಹಿತಿ ನಮೂದು-ಖಾತೆಗೆ ಬರಲಿಲ್ಲಾ ಹಣ

» **ಮೊದಲ ಪುಟದಿಂದ**

ಜತೆ ಬೆಳೆ ಸಮೀಕ್ಷೆ ಸರಿಯಾಗಿ ಆಗಿಲ್ಲ, ಬೆಳೆ ಕಾಲಂನಲ್ಲಿ ತಪ್ಪು ನಮೂದಾಗಿ ಯಾವ ಪರಿಹಾರ,ವಿಮೆ ಬಂದಿಲ್ಲ ಇದಕ್ಕೆ ಕಾರಣ ಯಾರು? ಸರಿಪಡಿಸದಿದ್ದರೇ ಜತೆಗೆ ರೈತರನ್ನ ಕಡೆಗಣಿಸಿದರೇ ಉಗ್ರ ಹೋರಾಟ ಮಾಡಲಾಗುವುದು ಎಂದು ಸಂಘದ ಕಾರ್ಯದರ್ಶಿ ಹೆಚ್ ಪ್ರಕಾಶ್ ತಿಳಿಸಿದರು.

ವಿಷಯ ತಿಳಿದು ಸ್ಥಳಕ್ಕೆ ತಹಶೀಲ್ದಾರ್ ರೆಹಮಾನ್ ಪಾಷ,ಕೃಷಿ ಅಧಿಕಾರಿ ಜೀವನ್ ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿಗಳು ಆಗಮಿಸಿದರು.ಸಂದರ್ಭದಲ್ಲಿ ಸಮಸ್ಯೆಗಳನ್ನ ಆಲಿಸಿ ಮನವಿ ಪತ್ರ ಸ್ವೀಕರಿಸಿ ಅಧಿಕಾರಿಗಳು ಮಾತನಾಡಿದ ಬಳಿಕ ಪ್ರತಿಭಟನೆ ಹಿಂಪಡೆದರು.

**ಗ್ರಾಮಲೆಕ್ಕಾಧಿಕಾರಿಗಳು ಗ್ರಾಮಗಳಿಗೆ ಬರೋದಿಲ್ಲ:** ಪರಶುರಾಂಪುರ ದೊಡ್ಡ ಹೋಬಳಿಯಾಗಿದ್ದು ಸುಮಾರು ಗ್ರಾಮಗಳನ್ನ ಒಳಗೊಂಡಿದೆ.ಗ್ರಾಮದ ಕಂದಾಯ ಸಮಸ್ಯೆಗಳ ಪರಿಹಾರಕ್ಕೆ ಹೋಬಳಿ ಕೇಂದ್ರಕ್ಕೆ ಬರಬೇಕು.ಆಫೀಸ್ಸಿಗೆ ಬರೋದು ಲೇಟ್ ಕೇಳಿದರೆ ಮೀಟಿಂಗ್ ಅಲ್ಲಿತ್ತು ಅಂತ ಕಥೆ ಹೇಳುವರು.ಇನ್ನೂ ಗ್ರಾಮಕ್ಕೆ ಎಲ್ಲಿ ಬರುತ್ತಾರೆ. ಇಲ್ಲಿ ತನಕ ಕೆಲಾ ಗ್ರಾಮಗಳಲ್ಲಿ ಕಂದಾಯ ಅಧಿಕಾರಿಗಳನ್ನ ನೋಡಿಲ್ಲ ಎಂದು ರೈತರು ತಹಶೀಲ್ದಾರ್ ಸಮ್ಮುಖದಲ್ಲಿ ಆರೋಪಿಸಿದರು.

**ದಿನಕ್ಕೆ ಎರಡು ಬಾರಿ ಜಿಪಿಎಸ್ ಪೋಟೋ:** ಸಂಬಂಧಪಟ್ಟ ವಿಎಗಳು ವ್ಯಾಪ್ತಿಯ ಗ್ರಾಮಗಳಲ್ಲಿ ಇರಬೇಕು.ಜತೆಗೆ ದಿನಕ್ಕೆ ಎರಡು ಬಾರಿ ಜಿಪಿಎಸ್ ಪೋಟೋ ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡು ಗಂಟೆಯ ಬಳಿಕ ಕಳುಹಿಸಬೇಕು.ಎರಡು ಗಂಟೆ ನಂತರ ಹೋಬಳಿ ಮಟ್ಟದ ಕಚೇರಿಯಲ್ಲಿರಬೇಕು ಜತೆಗೆ ಅಧಿಕಾರಿಗಳು ಗ್ರಾಮಗಳಿಗೆ ಬರದೇ ಇದ್ದರೆ ಕೂಡಲೇ ದೂರವಾಣಿ ಸಂಖ್ಯೆ ನೀಡಿ.ಇದಕ್ಕೆ ಪೋನ್ ಮಾಡಿ ತಿಳಿಸಿ ಎಂದು ತಹಶೀಲ್ದಾರ್ ರೆಹಮಾನ್ ಪಾಷ ಉಪತಹಸೀಲ್ದಾರ್ ಅವರಿಗೆ ನಾಳೆಯಿಂದಲೇ ಪಾಲನೆಯಾಗಲಿ ಎಂದು ಕೂಡಲೇ ಮೆಮೋ ಕೊಡಿ ಎಂದರು.

ಮನವಿ ಸ್ವೀಕರಿಸಿ ತಹಶೀಲ್ದಾರ್ ರೆಹಮಾನ್ ಪಾಷ ಮಾತನಾಡಿ,ಬೆಳೆ ಪರಿಹಾರ,ವಿಮೆಯ ತಾರತಮ್ಯದ ಬಗ್ಗೆ ನೀವು ನೀಡುವ ಮನವಿ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಯಾವುದೇ ವಿಮೆ,ಪಿ.ಎಂ.ಕಿಸಾನ್ ಸೇರಿದಂತೆ ಇನ್ನಿತರ ಹಣವನ್ನು ಬ್ಯಾಂಕ್ನವರಿಗೆ ತಡೆ ಹಿಡಿಯ ದಂತೆ ಮೇಲಾಧಿಕಾರಿಗಳು ಬ್ಯಾಂಕ್ನವರಿಗೆ ತಿಳಿಸಿ। ದ್ದಾರೆ.ತಾಲೂಕು ವ್ಯಾಪ್ತಿಯಲ್ಲಿ ಬ್ಯಾಂಕ್ ಸಿಬ್ಬಂದಿ ಸಭೆ ಕರೆದು ಸೂಚಿಸಲಾಗುವುದು ಎಂದರು.

**ನೂತನ ನಾಢಕಚೇರಿ ಕಟ್ಟಡಕ್ಕೆ ಒತ್ತಾಯ:** ಗ್ರಾಮದ ನಾಢಕಚೇರಿಯು ದುರಸ್ತಿಯಲ್ಲಿರುವುದರಿಂದ ಸಿಬ್ಬಂದಿ ಪ್ರಾಣದ ಹಂಗು ತೊರೆದು ಕೆಲಸ ನಿರ್ವಹಿಸುತ್ತಿದ್ದಾರೆ. ಮಳೆಗಾಲದಲ್ಲಿ ಬಂದರೇ

ವಸಾಕು ಕಂದಾಯ ಇಲಾಖೆಯ ದಾಖಲೆಗಳ ಸಂರಕ್ಷಣೆಗೆ ತಾಟಪಲ್ ಮೊರೆ ಹೋಗುವಂತಾಗಿದೆ.ಸಿಬ್ಬಂದಿ ಸೇರಿದಂತೆ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯವಿಲ್ಲ ಕಚೇರಿ ಕಟ್ಟಡಕ್ಕೆ ರೈತರು ಒತ್ತಾಯಿಸಿದರು.

## ಕುಡಿಯುವ ನೀರಿಗಾಗಿ ಮಹಿಳೆಯರ ಆಕ್ರಂದನ

» **ಚಳ್ಳಕೆರೆ**

ತಾಲ್ಲೂಕಿನ ನನ್ನಿವಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವರವಿನೋರಹಟ್ಟಿ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆ ನಿರಂತರವಾಗಿದ್ದು, ನೀರಿನ ಅಭಾವದಿಂದ ಈ ಭಾಗದ ಜನರು ರೋಸಿದ್ದಾರೆ. ಗ್ರಾಮದಲ್ಲಿರುವ ಮಿನಿಟ್ಯಾಂಕ್‌ನ ಮುಂದೆ ಪ್ರತಿನಿತ್ಯ ಗ್ರಾಮದ ಮಹಿಳೆಯರು ಸರಥಿ ಸಾಲಿನಲ್ಲಿಟ್ಟು ನೀರಿಗಾಗಿ ಕಾಯುವ ಸ್ಥಿತಿ ಉಂಟಾಗಿದೆ.

ಗ್ರಾಮದ ಮಹಿಳೆರಾದ ಚಂದ್ರಮ್ಮ, ಸುಜಾತ,ಬೈಯಮ್ಮ, ದಡ್ಡಮ್ಮ, ಪಾಲಕ್ಕ, ಶಾರದಮ್ಮ ಮುಂತಾದವರು ಮಾತನಾಡಿ, ಕುಡಿಯುವ ನೀರಿನ ತೊಂದರೆಯ ಬಗ್ಗೆ ಈಗಾಗಲೇ ಹಲವು ಬಾರಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಚುನಾವಣೆ ಹಿನ್ನೆಲೆಯಲ್ಲಿ ಶಾಸಕರನ್ನು ಭೇಟಿ ಮಾಡಲು ಸಾಧ್ಯವಾಗಿಲ್ಲ. ಗ್ರಾಮದ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡುವಂತೆ ಹಲವಾರು ಬಾರಿ ಅಧಿಕಾರಿಗಳಿಗೆ ಗೋಗರೆದರೂ ಯಾರೂ ಸಹ ಈ ಬಗ್ಗೆ ಗಮನಹರಿಸುತ್ತಿಲ್ಲ. ಪ್ರತಿನಿತ್ಯ ನೀರಿಗಾಗಿ ಮಹಿಳೆಯರು ಕಾಯುವ



ಸ್ಥಿತಿ ಉಂಟಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಗ್ರಾಮ ಪಂಚಾಯಿತಿ ಸದಸ್ಯ ಉಜ್ಜಿನಯ್ಯ ಮಾತನಾಡಿ, ಇಲ್ಲಿನ ನೀರಿನ ಸಮಸ್ಯೆಯ ಬಗ್ಗೆ ಪಿಡಿಒಯವರಿಗೆ ಈಗಾಗಲೇ ಹಲವಾರು ಬಾರಿ ಮಾಹಿತಿ ನೀಡಲಾಗಿದೆ. ಆದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ಪ್ರತಿನಿತ್ಯ ಮಹಿಳೆಯರು ನೀರಿಗಾಗಿ ಪರಿತಪಿಸುವ ಸ್ಥಿತಿಯನ್ನು ನೋಡಲು ಸಾಧ್ಯವಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗ್ರಾಮಕ್ಕೆ ಆಗಮಿಸಿ ನೀರಿನ ಸಮಸ್ಯೆ ನಿವಾರಿಸುವಂತೆ ಮನವಿ ಮಾಡಿದರು. ದೊರೆನಾಗರಾಜು, ಸಣ್ಣಬೋರಯ್ಯ, ಅಪ್ಪಣ್ಣ, ದೊಡ್ಡಬೋರಯ್ಯ ಮುಂತಾದವರು ಉಪಸ್ಥಿತರಿದ್ದರು.



# ಪೋಕ್ಸೋ



## (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ) ಮತ್ತು ಸನ್ಯಾಸಾಶ್ರಮ...........

## ಇಷ್ಟೊಂದು ದುರ್ಬಲ ವ್ಯವಸ್ಥೆಯಲ್ಲಿ ನಾವಿದ್ದೇವೆಯೇ.......

ಒಂದು ಪ್ರಖ್ಯಾತ, ಬೃಹತ್ ಶಿಕ್ಷಣ ಸಂಸ್ಥೆಗಳನ್ನು ನಡೆಸುವ, ರಾಜ್ಯದ ಪ್ರತಿಷ್ಠಿತ ಮಠ ಮತ್ತು ಅದರ ಮುಖ್ಯಸ್ಥರಾಗಿದ್ದ ರಾಜ್ಯದ ಅತ್ಯಂತ ಮಹತ್ವದ ಪ್ರಭಾವಿ ವ್ಯಕ್ತಿಯೂ ಆಗಿದ್ದ, ಪ್ರಗತಿಪರ ಚಿಂತನೆಯ ಕ್ರಾಂತಿಕಾರಿ ಮಠಾಧೀಶರು ಆಗಿದ್ದ ಗೌರವಾನ್ವಿತ ಪೂಜ್ಯ ಸ್ವಾಮೀಜಿಗಳೆಂಬ ವ್ಯಕ್ತಿಯನ್ನು ಒಂದು ದಿನ ದಿಢೀರನೆ ರಾಜ್ಯದ ಪೋಲೀಸರು ಬಂಧಿಸುತ್ತಾರೆ. ಅದಕ್ಕೆ ತನಿಖಾಧಿಕಾರಿಗಳು ನೀಡುವ ಕಾರಣ ಅವರ ಮೇಲೆ ಹೆಣ್ಣು ಮಕ್ಕಳಿಬ್ಬರು ನೀಡಿರುವ ಲೈಂಗಿಕ ಕಿರುಕುಳ ಮತ್ತು ಅತ್ಯಾಚಾರದ ದೂರು. ಇದನ್ನು ಕೇಳಿ ರಾಜ್ಯದ ಜನ ದಿಗ್ಭ್ರಮೆಗೆ ಒಳಗಾಗುತ್ತಾರೆ......

ನಂತರ ಉನ್ನತ ಅಧಿಕಾರಿಗಳಿಂದ ತನಿಖೆ ನಡೆಯುತ್ತದೆ. ಎಲ್ಲಾ ಸಾಕ್ಷಿ, ದಾಖಲೆ, ಹೇಳಿಕೆಗಳನ್ನು ಪರಿಶೀಲಿಸಿ ರಾಜ್ಯದ ಪೋಲೀಸರು ಎರಡು ಪೋಕ್ಸೋ ಪ್ರಕರಣ ದಾಖಲಿಸಿ ವಿವರವಾದ ಆರೋಪ ಪಟ್ಟಿ ಸಲ್ಲಿಸುತ್ತಾರೆ. ಅದರಲ್ಲಿ ಈ ಪ್ರಸಿದ್ಧ ಮತ್ತು ಪ್ರಭಾವಿ ವ್ಯಕ್ತಿಯ ಮೇಲೆ ಅತ್ಯಾಚಾರವೂ ಸೇರಿ ಸಾಕಷ್ಟು ಅಸಹ್ಯ ರೀತಿಯ ವರ್ತನೆಯನ್ನು ಆರೋಪಿಸುತ್ತಾರೆ......

ನೆನಪಿಡಿ ಅವರ ವಯಸ್ಸು ಸುಮಾರು 65 ಮತ್ತು ಅವರು ನಮ್ಮ ನಿಮ್ಮಂತೆ ಸಾಮಾನ್ಯರಲ್ಲ. ಅವರ ಮೇಲೆ ಸುಳ್ಳು ಕೇಸು ಹಾಕುವುದು ಅಷ್ಟು ಸುಲಭವಲ್ಲ. ಈ ಆರೋಪದ ಪರಿಣಾಮ ಅವರು ಜೈಲಿಗೆ ಹೋಗಿ ಪೀಠಾಧಿಪತಿ ಸ್ಥಾನವನ್ನು ಕಳೆದುಕೊಳ್ಳುತ್ತಾರೆ......

ಕೇವಲ 14 ತಿಂಗಳು ಮಾತ್ರ ಕಳೆದಿದೆ. ಇಡೀ ವಾತಾವರಣ ಸಂಪೂರ್ಣ ಬದಲಾಗಿದೆ. ಅವರಿಗೆ ಜಾಮೀನು ಮಂಜೂರಾಗಿದೆ. ಅವರು ಮಠದ ಸ್ಥಳಕ್ಕೆ ಹೋಗಲು ನಿಷೇಧವಿದೆ. ಆದರು ಆ ಮಠದ ಮುಖ್ಯಸ್ಥರು ಈಗ ಅವರೇ. ದೂರದಿಂದಲೇ ಕೋಟ್ಯಾಂತರ ರೂಪಾಯಿಗಳ ಆಸ್ತಿಯ ಮಠವನ್ನು ನಿಯಂತ್ರಿಸುತ್ತಾರೆ. ಮತ್ತೆ ಆ ವ್ಯಕ್ತಿಯ ಪಾದಗಳಿಗೆ ಭಕ್ತರು ಕೈ ಮುಗಿದು ಪೂಜಿಸುತ್ತಾರೆ. ಅವರು ಎಂದಿನಂತೆ ಶ್ರೀ ಶ್ರೀ ಶ್ರೀ ಪರಮ ಪೂಜ್ಯ ........ ಸ್ವಾಮಿಗಳು....

ಇದು ನಾಟಕದ ಒಂದು ಅಧ್ಯಾಯ ಮಾತ್ರ.

ಎರಡನೇ ಅಧ್ಯಾಯದಲ್ಲಿ.....

ಆ ವ್ಯಕ್ತಿ ನಿಜವಾದ ಅಪರಾಧಿಯೋ, ನಿರಪರಾಧಿಯೋ ನ್ಯಾಯಾಲಯ ಮುಂದೆಂದೋ ಒಂದು ದಿನ ತೀರ್ಮಾನ ಮಾಡುತ್ತದೆ. ಅದರ ತೀರ್ಪನ್ನು ಪ್ರಶ್ನಿಸುತ್ತಾ ಮೇಲಿನ ನ್ಯಾಯಾಲಯಗಳು ಮತ್ತೆಷ್ಟೋ ವರ್ಷಗಳ ನಂತರ ಮತ್ತೆ ಬೇರೆಯ ತೀರ್ಪು ಕೊಡಬಹುದು. ಅದು ಬೇರೆ ವಿಷಯ. ಆದರೆ......

ಭಾರತದ ಸಂವಿಧಾನ, ಅಪರಾಧ ಕಾನೂನು, ಪೋಲೀಸ್ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ, ಸಮಾಜದ ಜನಸಾಮಾನ್ಯರು ಮತ್ತು ಮಾನವೀಯ ಮೌಲ್ಯಗಳು ಇಷ್ಟೊಂದು ಕೆಳ ಹಂತಕ್ಕೆ ಇಳಿದಿದೆಯೇ, ಇಡೀ ವ್ಯವಸ್ಥೆ ದುರ್ಬಲವಾಗಿದೆಯೇ, ಅಸಹಾಯಕವಾಗಿದೆಯೇ. ಈ ಸಂಶಯ ನಮ್ಮನ್ನು ಕಾಡುತ್ತಿಲ್ಲವೇ.....



ಚಿಕ್ಕ ಮಕ್ಕಳನ್ನು ಅತ್ಯಾಚಾರ ಮಾಡಿ, ಪೋಲೀಸರಿಂದ ಬಂಧನಕ್ಕೊಳಗಾಗಿ, ಜೈಲಿಗೆ ಹೋಗಿ, ಕೇಲವೇ ತಿಂಗಳುಗಳಲ್ಲಿ ಅಲ್ಲಿಂದ ಹೊರಬಂದು ಮತ್ತೆ ಅದೇ ಸ್ಥಾನ ಗೌರವ ಪಡೆಯುವ ಸಮಾಜದಲ್ಲಿ ನಾವು ಬದುಕುವುದಾದರು ಹೇಗೆ, ಯಾರನ್ನು ನಂಬಿ ನಾವು ನೆಮ್ಮದಿಯಾಗಿರುವುದು, ಈ ಘಟನೆ ಈಗಾಗಲೇ ಹುಟ್ಟಾ ಕ್ರಿಮಿನಲ್ ಆಗಿರುವ ವ್ಯಕ್ತಿಗಳಿಗೆ ಪ್ರೋತ್ಸಾಹ ನೀಡಿದಂತಾಗಲಿಲ್ಲವೇ, ಕೊಲೆ ಅತ್ಯಾಚಾರಿಗಳಿಗೆ ಬಿಡುಗಡೆ ಭಾಗ್ಯ ಸಿಗುವಂತಾಗಲಿಲ್ಲವೇ. ಅಷ್ಟು ದೊಡ್ಡ ಆರೋಪಿಯೇ ಮತ್ತೆ ಸಮಾಜದಲ್ಲಿ ತಲೆ ಎತ್ತಿ ನಡೆಯುವಾಗ ಕಳ್ಳ, ವಂಚಕ, ಭ್ರಷ್ಟರು ಇದನ್ನು ಗಮನಿಸದೇ ಇರುತ್ತಾರೆಯೇ.......

ಇನ್ನು ಮೂರನೆಯ ಅಧ್ಯಾಯ.....

ನೇರವಾಗಿ ನಮಗೆ ಮತ್ತು ನಮ್ಮ ಆತ್ಮಸಾಕ್ಷಿಗೆ ಸಂಬಂಧಿಸಿದ್ದು. ಈ ಅಧ್ಯಾಯದಲ್ಲಿ ಆ ಮಠಾಧೀಶರ ಪಾತ್ರ ಇರುವುದಿಲ್ಲ. ಏಕೆಂದರೆ ಒಬ್ಬ ವ್ಯಕ್ತಿ ಈ ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದು ಆತನ ಸ್ವತಂತ್ರ ನಿರ್ಧಾರ. ಒಬ್ಬ ಸ್ವಾಮೀಜಿಯಾಗಿ ನನ್ನ ನಡವಳಿಕೆ ಹೇಗಿರಬೇಕು ಎಂಬುದು ಅವರೇ ನಿರ್ಧರಿಸುತ್ತಾರೆ. ಅದರ ಪರಿಣಾಮ ಫಲಿತಾಂಶ, ಒಳಿತು ಕೆಡಕು ಅವರೇ ಅನುಭವಿಸುತ್ತಾರೆ. ಆದರೆ ಈ ಸಮಾಜಕ್ಕೆ ಮತ್ತು ಇಲ್ಲಿನ ವ್ಯವಸ್ಥೆಗೆ ಏನಾಗಿದೆ. ವ್ಯವಸ್ಥೆ ವ್ಯಕ್ತಿಯಂತೆ ಸ್ವತಂತ್ರ ತೀರ್ಮಾನ ಕೈಗೊಳ್ಳುವುದಿಲ್ಲ. ಅದು ಒಂದು ಕ್ರಮಬದ್ಧ ನೀತಿ ನಿಯಮಗಳ ಧರ್ಮ ಮತ್ತು ಕಾನೂನು ಹೊಂದಿದೆ. ಸಾರ್ವಜನಿಕವಾಗಿ ವ್ಯಕ್ತಿಗಳು ಅದಕ್ಕೆ ಬದ್ಧರಾಗಿಯೇ ನಡೆಯಬೇಕು. ಮನುಷ್ಯನ ಘನತೆಯನ್ನು ಕಾಪಾಡಿ ಸಮಾಜವನ್ನು ಕ್ರಮಬದ್ಧವಾಗಿ ಶತಶತಮಾನಗಳ ಕಾಲ ಮುನ್ನಡೆಸಲು ರೂಪಿಸಿಕೊಂಡ ನಿಯಮಗಳಿವು. ಸದ್ಯ ಸಂವಿಧಾನ ನಮ್ಮ ಅಂತಿಮ ನ್ಯಾಯಾಲಯ. ಅದು ಸಹ ಯಾವ ಕಾರಣದಿಂದಲೇ ಆಗಿರಲಿ ಈ ರೀತಿ ವಿವೇಚನೆ ಇಲ್ಲದೆ ಕೇವಲ ವಕೀಲಿಕೆಯ ಕಾರಣ ಆರೋಪಿ ಕೆಲವೇ ಸಮಯದಲ್ಲಿ ನಿರಾಳವಾಗುವುದು, ಜನ ಅವರನ್ನು ಮತ್ತೆ ವಿಜೃಂಭಿಸುವುದು ಭವಿಷ್ಯದ ದೃಷ್ಟಿಯಿಂದ ಎಷ್ಟು ಸರಿ. ಹೌದು ಕಾನೂನಿನ ಪ್ರಕಾರ ಎಲ್ಲವೂ ಸರಿ ಇರಬಹುದು. ಇತರೆ ಪ್ರಕರಣಗಳಲ್ಲಿ ಇದನ್ನು ಗುರಾಣಿಯಾಗಿ ಬಳಸಬಹುದು, ವಾದ ಮಾಡುವ ಮೂಲಕ ಎಲ್ಲವನ್ನೂ ಸಮರ್ಥಿಸಬಹುದು ಆದರೆ ನಮ್ಮೆಲ್ಲರ ಆತ್ಮಸಾಕ್ಷಿಗೆ ಏನೆಂದು ಉತ್ತರಿಸುವುದು. ಆ ಅತ್ಯಾಚಾರಕ್ಕೆ ಒಳಗಾದ ಮಕ್ಕಳಿಗೆ ಹೇಗೆ ಸಮಾಧಾನ ಮಾಡುವುದು. ಈ ವ್ಯವಸ್ಥೆ ಇರುವುದೇ ಹೀಗೆ ಎಂದು ಹೇಳೋಣವೇ.....

ನಾಲ್ಕನೇ ಅಧ್ಯಾಯದಲ್ಲಿ.....

ಒಂದು ವೇಳೆ ಆ ವ್ಯಕ್ತಿ ನಿರಪರಾಧಿಯೇ ಆಗಿದ್ದರೆ ಇಡೀ ವ್ಯವಸ್ಥೆ ಎಷ್ಟೊಂದು ಕಠೋರವಾಗಿ ಒಬ್ಬ ವ್ಯಕ್ತಿಯನ್ನು ಬಿಂಬಿಸಿದೆ ಎಂದು ಭಾವಿಸಿ ತಲೆ ತಗ್ಗಿಸಬೇಕಲ್ಲವೇ. ಆ ಮಕ್ಕಳು ಚಿಕ್ಕ ವಯಸ್ಸಿನಲ್ಲೇ ಅಷ್ಟು ದೊಡ್ಡ ಸುಳ್ಳು ಹೇಳುವ ಮಟ್ಟಕ್ಕೆ ಬೆಳೆದರೆ ಅಥವಾ ಅವರನ್ನು ಯಾರೋ ದುಷ್ಟರು ದುರುಪಯೋಗ ಪಡಿಸಿಕೊಂಡರೆ. ಯಾವುದೇ ನಿಜವಾದರೂ ವ್ಯವಸ್ಥೆ ಸರಿ ಇಲ್ಲ ಎಂದೇ ಹೇಳಬೇಕಾಗುತ್ತದೆ....

ಅಂತಿಮವಾಗಿ ಐದನೆಯ ಅಧ್ಯಾಯದಲ್ಲಿ........

ಸ್ವಾಮೀಜಿಗಳಿಗೊಂದು ಕಿವಿ ಮಾತು......

ಮಾನ್ಯ ಗೌರವಾನ್ವಿತ ಪೂಜ್ಯ ಸ್ವಾಮೀಜಿಯವರೇ, ಸುಮಾರು 65 ವರ್ಷ ವಯಸ್ಸಿನ ನಿಮಗೆ ಈ ನೆಲ ಸಾಕಷ್ಟು ಕೊಟ್ಟಿದೆ. ನೀವು ಒಂದು ಸಣ್ಣ ಸಾಮ್ರಾಜ್ಯವನ್ನು ಬಹಳ ವರ್ಷಗಳ ಕಾಲ ಆಳಿದ್ದೀರಿ. ನಿಮ್ಮ ಆಡಳಿತ ಸಮಯದಲ್ಲಿ ನಿಜಕ್ಕೂ ಅನೇಕ ಒಳ್ಳೆಯ ಮಾನವೀಯ ಕೆಲಸಗಳನ್ನು ಮಾಡಿದ್ದೀರಿ. ಸಮ ಸಮಾಜದ ನಿರ್ಮಾಣಕ್ಕಾಗಿ ಸ್ವಲ್ಪ ಮಟ್ಟಿಗೆ ಶ್ರಮಿಸಿದ್ದೀರಿ. ಏನೋ ವೈಯಕ್ತಿಕ ಕಾಮನೆಗಳನ್ನು ನಿಯಂತ್ರಿಸಲು ಸಾಧ್ಯವಾಗದೆ ವಿಕೃತ ಮೆರೆದು ಸಿಕ್ಕಿ ಹಾಕಿಕೊಂಡಿದ್ದೀರಿ. ಬಹುತೇಕ ಎಲ್ಲವೂ ಬಟಾಬಯಲಾಗಿದೆ.....

ನೀವು ಸುಖದ ಸುಪ್ಪತ್ತಿಗೆಯನ್ನು ನೋಡಿದ್ದೀರಿ. ಜೈಲುವಾಸವನ್ನು ಅನುಭವಿಸಿದ್ದೀರಿ. ಇನ್ನು ಸಾಕು. ಒಮ್ಮೆ ಏಕಾಂತದಲ್ಲಿ ನಿಮ್ಮ ಆತ್ಮದೊಳಗೆ ಪ್ರವೇಶಿಸಿ. ಆಧ್ಯಾತ್ಮ ಚಿಂತಕರಾದ ನಿಮಗೆ ಅದು ಅಸಾಧ್ಯವೇನಲ್ಲ. ಒಂದು ವೇಳೆ ನೀವು ಘಟನೆಯಲ್ಲಿ ಭಾಗಿಯಾಗಿದ್ದರೆ ಕಾನೂನಿನ ಬಲೆಯೊಳಗೆ ಸಿಗದಂತೆ ವಿಷಾಧ ವ್ಯಕ್ತಪಡಿಸಿ ಅಥವಾ ನೀವು ನಿರಪರಾಧಿಯಾಗಿದ್ದರೆ ಯಾರು ಒಪ್ಪಲಿ ಬಿಡಲಿ ನೀವು ಮನಸ್ಸಿನ ಮಾತನ್ನು ಹೇಳಿ ವಾನಪ್ರಸ್ಥಾಶ್ರಮದಿಂದ ದಯವಿಟ್ಟು ಅಂತಿಮ ಸನ್ಯಾಸಾಶ್ರಮಕ್ಕೆ ತೆರಳಿ ಈ ಸಮಾಜಕ್ಕೆ ಒಂದು ತೆರೆದ ಮನಸ್ಸಿನ ತ್ಯಾಗದ ಸಂದೇಶ ನೀಡಿ....

ಈ ಸಮಾಜದಲ್ಲಿ ಸವಾಲು ಎಸೆದು ಗೆದ್ದವರು, ಫೀನಿಕ್ಸ್ ನಂತೆ ಬೂದಿಯಿಂದ ಎದ್ದು ಬಂದವರು, ಸೇಡು ತೀರಿಸಿಕೊಂಡವರು, ಹಿಯಾಳಿಸಿದವರ ಮುಂದೆ ಎದ್ದು ನಿಂತವರು ಸಾಕಷ್ಟು ಮಂದಿ ಇದ್ದಾರೆ. ಆದರೆ ಆತ್ಮಸಾಕ್ಷಿಯ ಕರೆಗೆ ಓಗೊಟ್ಟು ತ್ಯಾಗ ಮಾಡಿದ ಮಹಾಪುರುಷರು ಅತ್ಯಂತ ವಿರಳ. ಆ ಕೆಲಸವನ್ನು ನೀವು ಮಾಡಿದರೆ ಖಾವಿ ತೊಟ್ಟ ಸರ್ವಸಂಗ ಪರಿತ್ಯಾಗದ ಸಂಕೇತಕ್ಕೆ ಒಂದು ಅರ್ಥ ಬರುತ್ತದೆ ಮತ್ತು ನೀವು ಅದಕ್ಕೆ ಒಂದು ಮಾದರಿಯಾಗುವಿರಿ. ಆಯ್ಕೆ ನಿಮ್ಮ ವಿವೇಚನೆಗೆ ಬಿಟ್ಟದ್ದು.....

ಹಾಗೆಯೇ ಈ ಸ್ವಾಮೀಜಿಗೆ ಪಾದಪೂಜೆ ಮಾಡುವ ಅಥವಾ ಅವರನ್ನು ತಿರಸ್ಕರಿಸುವ ವಿವೇಚನೆ ಜನರಿಗೆ ಬಿಟ್ಟದ್ದು....

ಒಟ್ಟಿನಲ್ಲಿ ಮುಂದಿನ ನಮ್ಮ ಮಕ್ಕಳಿಗೆ ಇದರಿಂದ ಒಂದು ಸಂದೇಶ ರವಾನೆಯಾಗುತ್ತದೆ. ಅದು ಹೇಗಿರಬೇಕು ಎಂಬ ಆಯ್ಕೆ ನಮ್ಮೆಲ್ಲರಿಗೆ ಸೇರಿದ್ದು.

ದಯವಿಟ್ಟು ಯೋಚಿಸಿ ನಿರ್ಧರಿಸಿ.......

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,

ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ,

ಮನಗಳಲ್ಲಿ – ಮನೆಗಳಲ್ಲಿ – ಮತಗಳಲ್ಲಿ ಪರಿವರ್ತನೆಗಾಗಿ,



» ಲೇಖನ
ವಿವೇಕಾನಂದ. ಹೆಚ್.ಕೆ.
9844013068

## ಜಿಲ್ಲೆಯ ವಸತಿ ಶಾಲೆಗಳ ಎಸ್.ಎಸ್.ಎಲ್.ಸಿ ಫಲಿತಾಂಶ

**ದಾವಣಗೆರೆ:** ದಾವಣಗೆರೆ ಜಿಲ್ಲೆಯ ಒಟ್ಟು 22 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಸತಿ ಶಾಲೆಗಳಲ್ಲಿ ಸುಮಾರು 1004 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗಿ 963 ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. ಈ ವಸತಿ ಶಾಲೆಗಳಲ್ಲಿ 2024 ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಶೇ.95.92ರಷ್ಟು ಫಲಿತಾಂಶ ದಾಖಲಿಸಿರುತ್ತಾರೆ. ಶೇ.100 ರಷ್ಟು ಫಲಿತಾಂಶ ಪಡೆದ ವಸತಿ ಶಾಲೆಗಳು: ಮೊರಾರ್ಜಿ ದೇಸಾಯಿ ವಸತಿ ಶಾಲೆ (ಹಿಂ.ವರ್ಗ) ಮಾದನಬಾವಿ, ಹೊನ್ನಾಳಿ ತಾಲ್ಲೂಕು, ಮೊರಾರ್ಜಿ ದೇಸಾಯಿ ವಸತಿ ಶಾಲೆ (ಹಿಂ. ವರ್ಗ) ಮುಗ್ಗಿದರಾಗಿಹಳ್ಳಿ, ಜಗಳೂರು ತಾಲ್ಲೂಕು, ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ (ಪ.ಜಾತಿ) ಎಚ್.ಕಡೆದಕಟ್ಟೆ, ಹೊನ್ನಾಳಿ ತಾಲ್ಲೂಕು, ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ವರ್ಗ) ವಡೇರಹಳ್ಳಿ, ದಾವಣಗೆರೆ ತಾಲ್ಲೂಕು, ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ (ಪ.ವರ್ಗ) ಉದ್ದಘಟ್ಟ, ಜಗಳೂರು ತಾಲ್ಲೂಕು, ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆ (ಪ.ವರ್ಗ) ಕೊಂಡಜ್ಜಿ, ಹರಿಹರ ತಾಲ್ಲೂಕು.

### ಗ್ರಾಮೀಣ ಭಾಗದ ಜನರಿಗೆ ಆರೋಗ್ಯಭಾಗ್ಯ ಕಲ್ಪಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಮುಂದು : ಡಾ.ಬಿಂದುಶ್ರೀ

## ಚಳ್ಳಕೆರೆ: ಡೆಂಗ್ಯೂವಿರೋಧಿ ಮಾಸಚಾರಣೆ

» ಚಳ್ಳಕೆರೆ

ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ಸುತ್ತಮುತ್ತಲಿನ ವಾತಾವರಣವನ್ನು ಶುಚಿಯಾಗಿಟ್ಟುಕೊಂಡಲ್ಲಿ ಯಾವುದೇ ರೋಗಗಳು ನಮ್ಮನ್ನು ವ್ಯಾಪಿಸಲು ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ಆರೋಗ್ಯ ಇಲಾಖೆ ಗ್ರಾಮೀಣ ಭಾಗದ ಜನರ ಆರೋಗ್ಯವನ್ನು ಸದೃಢಗೊಳಿಸಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದ್ದು, ಡೆಂಗ್ಯೂ ಜ್ವರ ವ್ಯಾಪಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಗೋಪನಹಳ್ಳಿ ಸರ್ಕಾರಿ ಪ್ರಾಥಮಿಕ ಕೇಂದ್ರದ ವೈದ್ಯಾಧಿಕಾರಿ ಡಾ.ಬಿಂದುಶ್ರೀ ತಿಳಿಸಿದರು.




ಅವರು, ಸೋಮವಾರ ಗೋಪನಹಳ್ಳಿ ಆಸ್ಪತ್ರೆ ಆವರಣದಲ್ಲಿ ಡೆಂಗ್ಯೂವಿರೋಧಿ ಮಾಸಚಾರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಆರೋಗ್ಯ ಇಲಾಖೆ ಸಿಬ್ಬಂದಿ, ಆಶಾ, ಅಂಗನವಾಡಿ ಕಾರ್ಯಕರ್ತರೊಂದಿಗೆ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಡೆಂಗ್ಯೂ ವಿರೋಧಿ ಜಾಗೃತಿ ಜಾಥವನ್ನು ಸಹ ನಡೆಸಲಾಯಿತು. ಸಾರ್ವಜನಿಕರು ಆರೋಗ್ಯ ಇಲಾಖೆ ಜಾಗೃತಿ ಜಾಥವನ್ನು ವೀಕ್ಷಿಸಿದರು.

ಪ್ರಯೋಗಾಲಯ ಅಧಿಕಾರಿ ಎಚ್. ತಿಪ್ಪೇಸ್ವಾಮಿ ಮಾತನಾಡಿ, ಗ್ರಾಮೀಣ ಭಾಗಗಳಲ್ಲಿ ಡೆಂಗ್ಯೂಜ್ವರ ದಿಢೀರನೆ ಹರಡುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಸಮೀಕ್ಷೆ ನಡೆಸಿ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ. ಮನೆಯೊಳಗೆ ಮತ್ತು ಹೊರಗೆ ಇರುವ ನೀರಿನ ತೊಟ್ಟಿಗಳನ್ನು ಸ್ವಚ್ಚಗೊಳಿಸುವ ಕಾರ್ಯ ಮುಂದುವರೆದಿದೆ. ಗ್ರಾಮ ಪಂಚಾಯಿತಿ ವತಿಯಿಂದ ಚರಂಡಿಗಳ ಸ್ವಚ್ಚಗೊಳಿಸುವ ಕಾರ್ಯವೂ ಪ್ರಗತಿಯಲ್ಲಿದೆ ಎಂದರು.

ಎಲ್‌ಎಚ್‌ವಿ ಅಶ್ವಿನಿ, ಜಿ.ಟಿ.ಮಮತ, ಬಾಬುರಾಜೇಂದ್ರ, ಲಕ್ಷ್ಮಿದೇವಿ, ವಿಶಾಲಾಕ್ಷಿ, ಹಮೀದ್, ರಂಜಿತ, ಆಶಾಕಾರ್ಯಕರ್ತೆಯರಾದ ವಸಂತಮ್ಮ, ಗೌರಮ್ಮ, ಭಾರತಮ್ಮ, ವಿಶಾಲಾಕ್ಷಿ, ಅನುಸೂಯಮ್ಮ, ರಾಧಮ್ಮ ಮುಂತಾದವರು ಜಾಥದಲ್ಲಿ ಪಾಲ್ಗೊಂಡಿದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T